MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

YUVA MARGA KANNADA DAILY NEWS PAPER


ಸಂಪಾದಕರು : ಅನಿಲ ಕುಮಾರ್ ಹೆಚ್ Cell : 9743497111

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ Cell : 9743496111

ಸಂಪುಟ: 04 ಸಂಚಿಕೆ : 195 ಭಾನುವಾರ : 18–05–2025 ರಾಯಚೂರು RNI NO: KARKAN/2022/90446 ಪುಟ: 4 ಬೆಲೆ: ರೂ: 2–00

VOLUME: 04 ISSUE: 195 SUNDAY: 18–05–2025 RAICHUR EMAIL: YUVAMARGA@GMAIL.COM PAGE: 4 PRICE: Rs: 2-00


**ಯುವ ಸ್ಫೂರ್ತಿ**



ನಿಮಗೆ ಸಹಾಯಹಸ್ತ ಚಾಚಿದವರನ್ನು ಮರೆಯಬೇಡಿ, ನಿಮ್ಮನ್ನು ಪ್ರೀತಿಸಿದವರನ್ನು ದ್ವೇಷಿಸಬೇಡಿ, ನಿಮ್ಮನ್ನು ನಂಬಿದವರಿಗೆ ಮೋಸ ಮಾಡಬೇಡಿ.
–ಸ್ವಾಮಿ ವಿವೇಕಾನಂದ

## ಭಾರತದ ಸೇನಾ ಬತ್ತಳಿಕೆಗೆ ಶೀಘ್ರದಲ್ಲೇ ಎಸ್–500..?



**ನವದೆಹಲಿ, ಮೇ 18–** ಭಾರತದ ಸೇನಾ ಬತ್ತಳಿಕೆಗೆ ಶೀಘ್ರದಲ್ಲೇ ಎಸ್–500 ಸೇರ್ಪಡೆಯಾಗುವ ಸಾಧ್ಯತೆ ಇದೆ. ಒಂದು ವೇಳೆ ಈ ಅಸ್ತ್ರ ಸೇನೆಗೆ ಬಂದರೆ ವಿಶ್ವದಲ್ಲಿ ನಮ್ಮನ್ನು ಯಾರು ಏನು ಮಾಡಲು ಸಾಧ್ಯವಾಗುವುದಿಲ್ಲ ಎಂದು ರಕ್ಷಣಾ ಕ್ಷೇತ್ರದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಅಪರೇಷನ್ ಸಿಂಧೂರ ಕಾರ್ಯಚರಣೆಯಲ್ಲಿ ಭಾರತದ ಸೇನಾ ಸಾಮರ್ಥ್ಯ ಕಂಡು ಇಡೀ ಜಗತ್ತೇ ಅಚ್ಚರಿಗೊಂಡಿದೆ. ಹೀಗಾಗಿ ಭಾರತದ ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಹೆಚ್ಚಾಗಿದೆ. ಈ ನಡುವೆ ಭಾರತದ ರಕ್ಷಣಾ ವ್ಯವಸ್ಥೆ ಇನ್ನಷ್ಟು ಬಲಿಷ್ಠವಾಗುತ್ತಿರುವ ಬಗ್ಗೆ ರಕ್ಷಣಾ ಕ್ಷೇತ್ರದ ವಿಶ್ಲೇಷಕರು ಮಾಹಿತಿ ನೀಡಿದ್ದಾರೆ.ಸದ್ಯ ಇಸ್ರೇಲ್‌ನ ಐರನ್ ಡೋಮ್, ರಷ್ಯಾದ–400. ಅಮೆರಿಕ ಅಭಿವೃದ್ಧಿಪಡಿಸಿರುವ ಥಾಡ್ ಏರ್ ಡಿಫೆನ್ಸ್ ಸಿಸ್ಟಂ, ಡೇವಿಡ್ ಸಿಲ್ಲಿಂಗ್ ಏರ್ ಡಿಫೆನ್ಸ್ ಸಿಸ್ಟಂ ಜಗತ್ತಿನ ಶಕ್ತಿಶಾಲಿ ವಾಯುರಕ್ಷಣಾ ವ್ಯವಸ್ಥೆಗಳಾಗಿ ಗುರುತಿಸಿಕೊಂಡಿವೆ.

ಆದ್ರೆ ಎಸ್–500 ಏರ್ ಡಿಫೆನ್ಸ್ ಸಿಸ್ಟಂ ಭಾರತಕ್ಕೆ ಬಂದರೆ ಜಗತ್ತಿನಲ್ಲಿ ಭಾರತದ ಸೇನಾ ಶಕ್ತಿ ಮತ್ತಷ್ಟು ಬಲಿಷ್ಠವಾಗಲಿದೆ. ಜೊತೆಗೆ ಅಮೆರಿಕ, ರಷ್ಯಾ ದೇಶಗಳ ವಾಯುರಕ್ಷಣಾ ವ್ಯವಸ್ಥೆಯನ್ನೂ ಹಿಂದಿಕ್ಕಲಿದೆ ಎಂದು ಅಂದಾಜಿಸಲಾಗಿದೆ.ಎಸ್–500 ರಕ್ಷಣಾ ವ್ಯವಸ್ಥೆಯು ಎಸ್–400ನ ಮುಂದುವರಿದ ಭಾಗವಾಗಿದೆ.

2ನೇ ಪುಟಕ್ಕೆ

## ಪಿಡಿಒ ಅಮಾನತಿಗೆ ಒತ್ತಾಯಿಸಿ ಇಒ ರವರಿಗೆ ಮನವಿ



ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.18–**ತಾಲೂಕಿನ ಉಟಕನೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಮಿತಿ ವತಿಯಿಂದ ಉಟಕನೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಅಮಾನತ್ತು ಮಾಡುವಂತೆ ಒತ್ತಾಯಿಸಿ ಅನಿರ್ಧಿಷ್ಠಾವಧಿ ಧರಣಿ ಸತ್ಯಾಗ್ರಹ ನಡೆಸುತ್ತಿರುವ ಸ್ಥಳಕ್ಕೆ ಆಗಮಿಸಿದ ತಾಲೂಕು ಪಂಚಾಯಿತಿ ಕಾರ್ಯನಿರ್ವಹಕ ಅಧಿಕಾರಿ ಖಾಲೀದ್ ಅಹಮ್ಮದ್ ರವರಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ತಾಲೂಕು ಸಮಿತಿ ತಾ.ಸಂಚಾಲಕರಾದ ರಂಚಿತ್ ಕೊಡ್ಲಿ ಮನವಿ ಸಲ್ಲಿಸಿ ಮಾತನಾಡಿಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಯವರ ಅರೆಕಾಲಿಕ ನ್ಯಾಯಿಕ ನ್ಯಾಯಾಲಯವು 2023 ನ,22 ರಂದು ನೀಡಿದ ಅದೇಶದಲ್ಲಿ ಉಟಕನೂರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಈರಮ್ಮ ಅಮರಪ್ಪ ರವರಿಗೆ ಹಣಕಾಸು ವ್ಯವಹಾರ ಮಾಡದಂತೆ ಹಾಗೂ ಯಾವುದೇ ಗ್ರಾಮ

2ನೇ ಪುಟಕ್ಕೆ

## ಬೆಂಬಲ ಬೆಲೆ ಯೋಜನೆಯಡಿ ಶೀಘ್ರ ಹಿಂಗಾರು ಸೂರ್ಯಕಾಂತಿ ಖರೀದಿ: ಶಿವಾನಂದ ಪಾಟೀಲ


ಯುವ ಮಾರ್ಗ ಸುದ್ದಿ



**ರಾಯಚೂರ,ಮೇ.18–** ಕನಿಷ್ಠ ಬೆಂಬಲ ಬೆಲೆ ಯೋಜನೆಡಿಯಲ್ಲಿ ಹಿಂಗಾರು ಹಂಗಾಮಿನ ಸೂರ್ಯಕಾಂತಿ ಖರೀದಿಗೆ ಕೇಂದ್ರ ಸರ್ಕಾರವು ಅನುಮತಿ ನೀಡಿದ್ದು, ಶೀಘ್ರದಲ್ಲಿ ಖರೀದಿ ಆರಂಭಿಸುವುದಾಗಿ ಕೃಷಿ ಮಾರುಕಟ್ಟೆ, ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರಾದ ಶಿವಾನಂದ ಪಾಟೀಲ ಅವರು ತಿಳಿಸಿದ್ದಾರೆ.ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ್ದು, ಎಫ್‌ಎಕ್ಯು ಗುಣಮಟ್ಟದ ಸೂರ್ಯಕಾಂತಿಗೆ ಪ್ರತಿ ಕ್ವಿಂಟಾಲ್‌ಗೆ 7,280 ರೂ. ನಿಗದಿಪಡಿಸಲಾಗಿದ್ದು, ಬಾಗಲಕೋಟ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ ಹಾಗೂ ರಾಯಚೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಖರೀದಿ ಕೇಂದ್ರಗಳನ್ನು ತೆರೆಯುವುದಾಗಿ ಸಚಿವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ನಾಫೆಡ್ ಹಾಗೂ ಎನ್.ಸಿ.ಸಿ.ಎಫ್ ಸಂಸ್ಥೆಗಳನ್ನು ಹಾಗೂ ರಾಜ್ಯ ಸರ್ಕಾರ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳಿಯನ್ನು ಖರೀದಿ ಸಂಸ್ಥೆಗಳನ್ನಾಗಿ ನೇಮಕ ಮಾಡಿವೆ. ಅಗತ್ಯಕ್ಕೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ಆರಂಭಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿಗಳಿಗೆ ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಪ್ರತಿ ಎಕರೆಗೆ 4 ಕ್ವಿಂಟಾಲ್‌ನಂತೆ (ಗರಿಷ್ಠ 20 ಕ್ವಿಂಟಾಲ್) ಖರೀದಿ ಮಾಡಲಿದ್ದು, ಖರೀದಿ ಪ್ರಕ್ರಿಯೆ ಆದೇಶ ಹೊರಡಿಸಿದ ದಿನದಿಂದ 90 ದಿನಗಳವರೆಗೆ ನಡೆಯಲಿದೆ. ರೈತರು ತಮ್ಮ ಸಮೀಪದ ಪ್ಯಾಕ್ಸ್, ಎಫ್‌ಪಿಒ ಮತ್ತು ಟಿಎಪಿಸಿಎಂಎಸ್‌ಗಳಲ್ಲಿ ರೈತರು ತಮ್ಮ ಎಫ್‌ಐಡಿ ಸಂಖ್ಯೆ ನೀಡಿ ನೋಂದಣಿ ಮಾಡಿಸಿಕೊಂಡು, ಸೂರ್ಯಕಾಂತಿ ಮಾರಾಟ ಮಾಡಬಹುದು ಎಂದು ಸಚಿವರು ತಿಳಿಸಿದ್ದಾರೆ.

## ಜೂನ್ 30ರವರೆಗೆ ಬುಡಕಟ್ಟು ಹೆಮ್ಮೆಯ ವರ್ಷ ಅಭಿಯಾನ

ಯುವ ಮಾರ್ಗ ಸುದ್ದಿ



ರಾಯಚೂರು,ಮೇ.18– ಭಾರತ ಸರ್ಕಾರದ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದಿಂದ ಧರ್ತಿ ಆಬಾ ಬುಡಕಟ್ಟು ಗ್ರಾಮ ಅಭಿವೃದ್ಧಿ ಅಭಿಯಾನ (DA-JAGUA) ಯೋಜನೆಯಡಿ ಬುಡಕಟ್ಟು ಹೆಮ್ಮೆಯ ವರ್ಷ–2025 (JAN JATIYA GAURAV VARSH) ಆಚರಿಸಲು ದೇಶಾದ್ಯಂತ ಜೂನ್ 30ರವರೆಗೆ ಅಭಿಯಾನವನ್ನು ನಡೆಸಲಾಗುತ್ತಿದೆ. ಜಿಲ್ಲೆಯಲ್ಲಿ ವಿವಿಧ ಬಗ್ಗೆಯ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಬುಡಕಟ್ಟು ಹೆಮ್ಮೆಯ ವರ್ಷ–2025ರ ಆಚರಣೆ ಸಂಬಂಧ ಜಿಲ್ಲೆಯಾದ್ಯಂತ ಈಗಾಗಲೇ ಗುರುತಿಸಲಾದ ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗ್ರಾಮಗಳಲ್ಲಿ ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ ಆಧಾರ್ ಕಾರ್ಡ್, ಪಡಿತರ ಚೀಟಿ, ಆಯುಷ್ಮಾನ್ ಭಾರತ ಕಾರ್ಡ್ (ಪಿಎಮ್–ಜೆಎವೈ), ಜಾತಿ ಪ್ರಮಾಣ ಪತ್ರ, ಪಿಎಮ್ ಕಿಸಾನ್, ಜನ್ ದಾನ್ ಅಕೌಂಟ್ ಸೇರಿದಂತೆ ಕುಡಗೋಲು ಕಣ ರೋಗದ (Sickle cell) ಬಗ್ಗೆ ಮತ್ತು ಸಂಬಂಧಿತ ಪರೀಕ್ಷೆಯ ಬಗ್ಗೆ ಅರಿವು ಮೂಡಿಸುವ ಶಿಬಿರಗಳನ್ನು ಸಿಎಸ್‌ಸಿಎಸ್ ಮುಂಚೂಣಿ ಕಾರ್ಯಕರ್ತರು ಮತ್ತು ವಿವಿಧ ಇಲಾಖೆಗಳ ಒಮ್ಮುಖದ ಸಕ್ರೀಯ ಬೆಂಬಲದೊಂದಿಗೆ ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಂಚಾರ ಆರೋಗ್ಯ ಘಟಕದ ವಾಹನಕ್ಕೆ ಚಾಲನೆ

## ಕಾರ್ಮಿಕರ ಆರೋಗ್ಯ ರಕ್ಷಣೆ ಮುಖ್ಯ ಗುರಿ: ಶಾಸಕ ಬಸನಗೌಡ ದದ್ದಲ್

ಯುವ ಮಾರ್ಗ ಸುದ್ದಿ



**ರಾಯಚೂರು,ಮೇ.18–** ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿರ್ದೇಶನದಲ್ಲಿ ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರಿಂದ ಕಾರ್ಮಿಕರ ಆರೋಗ್ಯ ರಕ್ಷಣೆ ಆಗುತ್ತಿದೆ. ಕಾರ್ಮಿಕರ ಆರೋಗ್ಯ ರಕ್ಷಣೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಅವರಿಗೆ ಆರೋಗ್ಯ ಸೇವೆಯನ್ನು ಒದಗಿಸುವುದಕ್ಕಾಗಿ ಈ ವಾಹನವನ್ನು ಲೋಕಾ ರ್ಪಣೆಗೊಳಿಸಲಾಗಿದೆ ಎಂದು ಪರಿಶಿಷ್ಟ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಹೇಳಿದರು. ಮೇ.17ರ ಶನಿವಾರ ದಂದು ನಗರದ ರಾಯಚೂರು ಗ್ರಾಮೀಣ ಶಾಸಕರ ಕಚೇರಿ ಆವರಣದಲ್ಲಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸಂಚಾರ ಆರೋಗ್ಯ ಘಟಕದ ವಾಹನಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಾರ್ಮಿಕರಿಗೆ ಆರೋಗ್ಯ ಸಮಸ್ಯೆ ಉಂಟಾದಲ್ಲಿ ಅವರಿದ್ದ ಕಡೆಗೇ ಈ ವಾಹನವು ಸಂಚರಿಸಿ ಅವರಿಗೆ ಆರೋಗ್ಯ ಸೇವೆ ಒದಗಿಸಲಿದೆ. ಸರ್ಕಾರದ ಈ ಯೋಜನೆಯ ಸೌಲಭ್ಯವನ್ನು ರಾಯಚೂರು ಗ್ರಾಮೀಣ ಕ್ಷೇತ್ರದ ಎಲ್ಲ ಕಾರ್ಮಿಕರು ಸದುಪಯೋಗ ಪಡಿಸಿಕೊಳ್ಳಬೇಕೆಂದರು.ಈ ವೇಳೆ ಜಿಲ್ಲಾ ಕಾರ್ಮಿಕ ಇಲಾಖೆಯ ಅದಿಕಾರಿ ಆರತಿ ಅವರು ಮಾತನಾಡಿ, ಜಿಲ್ಲೆಯ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಅವರಿರುವ ಸ್ಥಳಕ್ಕೇ ತೆರಳಿ ಉಚಿತವಾಗಿ ಆರೋಗ್ಯ ತಪಾಸಣೆಗೆ ಒಳಪಡಿಸುವುದು, ಚಿಕಿತ್ಸೆ ಹಾಗೂ ಸಲಹೆ ನೀಡಲು ಮೊದಲಾದ ಸೇವೆ ಒದಗಿಸಲು ಜಿಲ್ಲೆಯಲ್ಲಿ 3 ಸಂಚಾರಿ ಆರೋಗ್ಯ ಘಟಕಗಳನ್ನು ಸಜ್ಜುಗೊಳಿಸಲಾಗಿದೆ ಎಂದರು.ಕಾರ್ಮಿಕ ಇಲಾಖೆ ಮತ್ತು ಕಟ್ಟಡ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಸಹಯೋಗದಲ್ಲಿ

2ನೇ ಪುಟಕ್ಕೆ

## ಗಿಲ್ಲೇಸೂಗುರು ಗ್ರಾಮದಲ್ಲಿ ನರೇಗಾ ಕೂಲಿಕಾರರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ




ಯುವ ಮಾರ್ಗ ಸುದ್ದಿ

**ರಾಯಚೂರು, ಮೇ 17–** ರಾಯಚೂರು ತಾಲೂಕಿನ ಗಿಲ್ಲೇಸೂಗುರು ಗ್ರಾಮ ಪಂಚಾಯಿತಿ ವತಿಯಿಂದ ಇಂದು ಗಿಲ್ಲೇಸೂಗುರು ಬೂಜು ಗುಡ್ಡದಲ್ಲಿ ನಡೆದ ಕಂದಕ ಬದು ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ನರೇಗಾ ಕೂಲಿಕಾರರಿಗಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಆಯೋಜಿಸಲಾಗಿತ್ತು.

ಗ್ರಾಮ ಪಂಚಾಯತಿ ಕಾರ್ಯದರ್ಶಿ ಹನುಮಂತ ಗಿಲ್ಲೇಸೂಗುರು ಅವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿ, ನರೇಗಾ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕೂಲಿಕಾರರ ಆರೋಗ್ಯದ ಹಿತದೃಷ್ಟಿಯಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ. ಕೂಲಿಕಾರರು ರಕ್ತದೊತ್ತಡ, ಮಧುಮೇಹ, ಎಚ್‌ಐವಿ, ರಕ್ತ ಪರೀಕ್ಷೆ ಮತ್ತು ಕ್ಷಯರೋಗ ಸೇರಿದಂತೆ ವಿವಿಧ ಆರೋಗ್ಯ ತಪಾಸಣೆಗಳನ್ನು ಒಂದೇ ಸೂರಿನಡಿ ಉಚಿತವಾಗಿ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಡಾ.ಶ್ರೀನಿವಾಸ ಹೆಲ್. ಪಿ.ಜಿ.ಇಂಡಿಯ ರಾಯ ಚೂರು ಅವರು, ಹೆಚ್ಚುತ್ತಿರುವ ಬಿಸಿಲಿನ ತಾಪಮಾನದ ಬಗ್ಗೆ ಎಚ್ಚರಿಕೆ ನೀಡಿದರು. ಕೂಲಿಕಾರರು ಹೆಚ್ಚು ನೀರು ಕುಡಿಯುವಂತೆ ಸಲಹೆ ನೀಡಿದರು. ಅಲ್ಲದೆ, ಹಿರಿಯ ನಾಗರಿಕರು ಮತ್ತು ಮಹಿಳೆಯರಿಗೆ ಬೆನ್ನು

2ನೇ ಪುಟಕ್ಕೆ

## ಕುಪ್ಪಿಗುಡ್ಡ ಸಿದ್ಧಿವೀರಾಂಜನೇಯ ಮೂರ್ತಿ ದುಷ್ಕರ್ಮಿಗಳಿಂದ ಧ್ವಂಸ: ಪ್ರಕರಣ ದಾಖಲು

ಯುವ ಮಾರ್ಗ ಸುದ್ದಿ

**ಲಿಂಗಸುಗೂರು.ಮೆ,18–** ತಾಲ್ಲೂಕಿನ ಕುಪ್ಪಿಗುಡ್ಡ ಸರ್ಜಾಪುರು ಗ್ರಾಮದ ಹತ್ತಿರ ಇರುವ ಸಿದ್ಧಿವೀರಾಂಜನೇಯ ಮೂರ್ತಿಯನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿರುವ ಘಟನೆ ನಡೆದಿದೆ.

ಸರ್ಜಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆ ಹಿಂಭಾಗದಲ್ಲಿರುವ ಚೆನ್ನಬಸವಸ್ವಾಮಿ ವಿಭೂತಿಮಠ ಆಶ್ರಮದ ಆವರಣದಲ್ಲಿದ್ದ ಸಿದ್ಧಿವೀರಾಂಜನೇಯ ಮೂರ್ತಿಯನ್ನು ದುಷ್ಕರ್ಮಿಗಳು ಧ್ವಂಸಗೊಳಿಸಿರುವುದು ದುಷ್ಕರ್ಮಿಗಳು ತುಂಡು ತುಂಡು ಮಾಡಿದ್ದಾರೆ.





2024 ರ ಡಿಸೆಂಬರ್‌ನಲ್ಲಿ ಮೂರ್ತಿಯನ್ನು ಪ್ರತಿಷ್ಠಾಪಿಸ ಲಾಗಿತ್ತು. ವಿಭೂತಿಮಠದ ಆಶ್ರಮದಲ್ಲಿದ್ದ ಕಳಸ ಹಾಗೂ ಇತರೆ ಪೂಜಾ ಸಾಮಾಗ್ರಿಗಳು ಇತ್ತೀಚಿಗೆ ಕಳ್ಳತನವಾಗಿವೆ ಎನ್ನಲಾಗಿದೆ.

ಕಳ್ಳತನ ಪ್ರಕರಣ ಮಾಸುವ ಮುನ್ನವೇ ಮೂರ್ತಿ ಧ್ವಂಸಗೊಳಿಸಿದ್ದು ಭಕ್ತರ ಭಾವನೆಗೆ ದಕ್ಕೆ ತಂದಿದೆ ಎಂದು ಗ್ರಾಮದ ಮುಖಂಡ ನೆಲೋಗಿ ಹನುಮಂತರಾಯ ನೀಡಿದ ದೂರಿನ್ವಯ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2ನೇ ಪುಟಕ್ಕೆ

## ಮೊದಲನೇಯ ಪುಟದಿಂದ

# ಭಾರತದ ಸೇನಾ ಬತ್ತಳಿಕೆಗೆ ಶೀಘ್ರದಲ್ಲೇ ಎಸ್–500..?

600 ಕಿಮೀ ದೂರದಿಂದಲೇ ಶತ್ರುಗಳ ಡ್ರೋನ್, ಫೈಟರ್ ಜೆಟ್, ಮಿಸೈಲ್ಗಳನ್ನ ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಪರೇಷನ್ ಸಿಂಧೂರದ ಕಾರ್ಯಾಚರಣೆ ವೇಳೆ ಪಾಕ್‌ನಿಂದ ಬರುತ್ತಿದ್ದ ಕ್ಷಿಪಣಿಗಳನ್ನು ಧ್ವಂಸಗೈದು ಭಾರತವನ್ನು ರಕ್ಷಿಸಿದ್ದ ಎಸ್–400 ವಾಯು ರಕ್ಷಣಾ ಕ್ಷಿಪಣಿಗೆ ಬೇಡಿಕೆ ಹೆಚ್ಚಾಗಿದೆ. ಪಾಕ್ ನಡುವಿನ ಸಂಘರ್ಷದಲ್ಲಿ ಇದರ ಪ್ರಯೋಗ ಯಶಸ್ವಿಯಾದ ಬೆನ್ನಲ್ಲೇ ಭಾರತ ಮತ್ತಷ್ಟು ಎಸ್–400 ವಾಯು ರಕ್ಷಣಾ ಕ್ಷಿಪಣಿಗೆ ಬೇಡಿಕೆಯಿಟ್ಟಿದೆ ಎಂದು ವರದಿಗಳು ತಿಳಿಸಿವೆ.

# ಪಿಡಿಒ ಅಮಾನತಿಗೆ ಒತ್ತಾಯಿಸಿ ಇಒ ರವರಿಗೆ ಮನವಿ

ಪಂಚಾಯಿತಿಗೆ ಸಂಬಂಧಿಸಿದ ಚೆಕ್ ಗಳಿಗೆ ಸಹಿ ಮಾಡದಂತೆ ಮಧ್ಯಂತರ ಅದೇಶವನ್ನು ಹೋರಾಡಿಸಿರುವುದರಿಂದ ಗ್ರಾಮಕ್ಕೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಕೂಡ ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮಸ್ಥರಿಗೆ ದೊರೆಯುತ್ತಿಲ್ಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶ್ವೇತಾ ಕುಲಕರ್ಣಿರವರು ಗ್ರಾಮ ಪಂಚಾಯಿತಿಯ ಬಾಪೂಜಿ ಸೇವಾ ಕೇಂದ್ರ, ಕರವಸೂಲಿ, ವಿದ್ಯುತ್ ಖಾತೆ, ಸಿಬ್ಬಂದಿ ಖಾತೆ ಸೇರಿದಂತೆ ಹಲವು ಖಾತೆಗಳಲ್ಲಿನ ಲಕ್ಷಾಂತರ ರೂ ಗಳ ಅನುದಾನವನ್ನು ಗ್ರಾಮದ ಅಭಿವೃದ್ಧಿಗೆ ಹಾಗೂ ಮೂಲಭೂತ ಸೌಲಭ್ಯಗಳಿಗಾಗಿ ಅನುದಾನವನ್ನು ಬಳಕೆ ಮಾಡದೆ ಹೊರಗುತ್ತಿಗೆಯ ಸಿಬ್ಬಂದಿಗಳ ಹೆಸರಿನಲ್ಲಿ ಮತ್ತು ಬೇರೆ ಬೇರೆ ರೀತಿಯಲ್ಲಿ ಗ್ರಾ.ಪಂ. ಅಧ್ಯಕ್ಷರ ಗಮನಕ್ಕೆ ತರದೆ ಅನುದಾನವನ್ನು ಬಳಸಿಕೊಂಡಿರುವುದರಿಂದ ಕೂಡಲೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಾಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಮನವಿ ಸ್ವೀಕರಿಸಿ ತಾ.ಪಂ. ಇ.ಓ. ಖಾಲೀದ್ ಅಹಮ್ಮದ್ ಮಾತನಾಡಿ ಗ್ರಾಮ ಪಂಚಾಯಿತಿಯ ವಿವಿಧ ಖಾತೆಗಳನ್ನು 8 ದಿನಗಳೊಳಗಾಗಿ ಪರಿಶೀಲಿಸಿ ಅನುದಾನ ದುರುಪಯೋಗವಾಗಿರುವುದು ಕಂಡು ಬಂದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಬರವಸೆ ನೀಡಿದರು.

ಅಧಿಕಾರಿಗಳು ನೀಡಿದ ಬರವಸೆಯಿಂದ ಪ್ರತಿಭಟನೆ ಹಿಂಪಡೆಯಲಾಯಿತು.

ತಾ.ಪಂ. ವ್ಯವಸ್ಥಾಪಕರಾದ ಬಸವರಾಜ, ಪೊಲೀಸ್ ಅಧಿಕಾರಿಗಳು ಹಾಗೂ ಕ.ದ.ಸಂ.ಸಮಿತಿಯ ಜಿಲ್ಲಾ ಖಜಾಂಚಿ ಅಮರನಾಥ, ಅನಿಲ್ ದೋತರಬಂಡಿ,ದ್ಯಾವಣ್ಣ, ಎಸ್.ಎಂ. ಪಾಟೀಲ್ ಉದ್ಬಾಳ್, ಮೌನೇಶ ನಾಯಕ, ಮಲ್ಲಪ್ಪ, ದೇವಣ್ಣ, ಬಸವಲಿಂಗಪ್ಪ ಉದ್ಬಾಳ್ ,ಕುಪ್ಪಮ್ಮ. ಬಸವ ನಿಲಗಲ್, ಸೋಮಲಿಂಗಪ್ಪ, ವೆಂಕಟೇಶ, ಅಜೀತ್, ಬಸವ ಬಗಲವಾಡ,ದೇವಣ್ಣ ಸಾಹುಕರ್, ಮೌನೇಶ ಮೇಟಿ, ಮಾಳಪ್ಪ ದೊತರಬಂಡಿ,ಸೇರಿದಂತೆ ಗ್ರಾ.ಪಂ.ಸದಸ್ಯರು ಸೇರಿದಂತೆ ಇನ್ನಿತರರು ಇದ್ದರು.

# ಕಾರ್ಮಿಕರ ಆರೋಗ್ಯ ರಕ್ಷಣೆ ಮುಖ್ಯ ಗುರಿ: ಶಾಸಕ ಬಸನಗೌಡ ದದ್ದಲ್

ರೂಪುಗೊಂಡಿರುವ ಈ ಘಟ ಕಗಳಲ್ಲಿ ವಿವಿಧ ತಪಾಸಣೆಗಳು, ಹೈಟೆಕ್ ಆರೋಗ್ಯ ಸೌಲಭ್ಯ ವ್ಯವಸ್ಥೆಯಿದ್ದು, ಒಂದು ಕ್ಲಿನಿಕ್‌ನಲ್ಲಿ ಹೊರರೋಗಿಗಳಿಗೆ ದೊರೆಯುವ ಎಲ್ಲ ಸೌಲಭ್ಯಗಳೂ ಇದರಲ್ಲಿ ಸಿಗಲಿವೆ ಎಂದರು.ಕಾರ್ಮಿಕ ಕಾರ್ಡ್ ಹೊಂದಿರುವ ಜಿಲ್ಲೆಯ 1 ಲಕ್ಷದ 13 ಸಾವಿರ 283 ಕಾರ್ಮಿಕರು ಹಾಗೂ ಅವರ ಕುಟುಂಬದವರಿಗೂ ಆರೋಗ್ಯ ಸೇವೆ ದೊರೆಯಲಿದೆ.ಘಟಕದಲ್ಲಿ 13 ಉಪಕರಣಗಳು: ವೈದ್ಯಕೀಯ ಉಪಕರಣಗಳು, ಪ್ರಯೋಗಾಲಯದ ಉಪಕರಣಗಳು ಹಾಗೂ ವಿವಿಧ ವೈದ್ಯಕೀಯ ಬಳಕೆ ವಸ್ತುಗಳು ಸೇರಿದಂತೆ ಒಟ್ಟು 13 ರೀತಿಯ ವೈದ್ಯಕೀಯ ಉಪಕರಣಗಳನ್ನು ಅಳವಡಿಸಲಾಗಿದೆ. ಸಿಬ್ಬಂದಿಗೆ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆಯೂ ಇದೆ. ಜಿಪಿಎಸ್ ವ್ಯವಸ್ಥೆಯೂ ಲಭ್ಯವಿದ್ದು, ತೆರಳುವ ಸ್ಥಳ, ಕಾರ್ಯಾಚರಣೆ ಸಮಯ, ಎಲ್ಲಿ ತಂಗುತ್ತದೆ ಎಂಬ ಎಲ್ಲ ಮಾಹಿತಿಯೂ ಕಚೇರಿಗೆ ತಲುಪಲಿದೆ. ಒಪ್ಪಂದ ಮಾಡಿಕೊಂಡಿರುವ ಖಾಸಗಿ ಆಸ್ಪತ್ರೆಯು ಕಾರ್ಯಾಚರಣೆಯನ್ನು ನಿರ್ವಹಿಸುತ್ತದೆ ಎಂದು ಮಾಹಿತಿ ನೀಡಿದರು. ಕಾರ್ಯಾಚರಣೆಗೆ 6 ಸಿಬ್ಬಂದಿ: ರೂಟ್ ಮ್ಯಾಪ್ ಪ್ರತಿ ಸಂಚಾರಿ ಆರೋಗ್ಯ ಘಟಕದಲ್ಲಿ ಒಬ್ಬರು ಎಂಬಿಬಿಎಸ್ ವೈದ್ಯಕೀಯ ಅಧಿಕಾರಿ ಇಬ್ಬರು ನರ್ಸ್ ಒಬ್ಬರು ಫಾರ್ಮಸಿಸ್ಟ್ ಅಥವಾ ಆಡಳಿತ ಸಹಾಯಕರು ಒಬ್ಬರು ಪ್ರಯೋಗಾಲಯ ತಜ್ಞರು ಒಬ್ಬರು ಚಾಲಕ ಅಥವಾ ಸಹಾಯಕ ಸೇರಿದಂತೆ 6 ಮಂದಿ ಕಾರ್ಯನಿರ್ವಹಿಸುವರು. ಜಿಲ್ಲೆಯಲ್ಲಿನ ವಾರ್ಡ್ ಹೋಬಳಿ ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ನೋಂದಾಯಿಸಿದ ಕಾರ್ಮಿಕರ ಪಟ್ಟಿ ಅನ್ವಯ ಘಟಕಗಳನ್ನು ನಿಲುಗಡೆ ಮಾಡಬೇಕಾದ ಸ್ಥಳವನ್ನು ನಿಗದಿಪಡಿಸಲಾಗುತ್ತದೆ ಎಂದರು. ಇದಕ್ಕೂ ಮುಂಚೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಸಂಚಾರ ಆರೋಗ್ಯ ಘಟಕಕ್ಕೆ ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್ ಅವರು ತಮ್ಮ ಗೃಹಕಚೇರಿಯಲ್ಲಿ ವಾಹನಕ್ಕೆ ಚಾಲನೆ ನೀಡಿದರು.ಇದೇ ಸಂದರ್ಭದಲ್ಲಿ ರಾಯಚೂರು ವೃತ್ತದ 1ನೇ ಕಾರ್ಮಿಕ ನಿರೀಕ್ಷಕರಾದ ಮಹ್ಮದ್ ಉಮರ್ ಅಬ್ದುಲ್, ಜಿಲ್ಲಾ ಬಾಲಕಾರ್ಮಿಕ ಯೋಜನೆಯ ಯೋಜನಾ ನಿರ್ದೇಶಕರಾದ ಮಂಜುನಾಥ ರೆಡ್ಡಿ, ಕಾರ್ಮಿಕ ಇಲಾಖೆಯ ಸಿಬ್ಬಂದಿಗಳಾದ ನಾಗರಾಜ, ಡಾ.ತನ್ವೀರ್, ಕೌಶಿಕ್ ಸೇರಿದಂತೆ ಇತರರು ಇದ್ದರು.

# ಗಿಲ್ಲೇಸೂಗುರು ಗ್ರಾಮದಲ್ಲಿ ನರೇಗಾ ಕೂಲಿಕಾರರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ

ಹಾಗೂ ಮೊಣಕಾಲು ನೋವು ನಿವಾರಕ ಉಚಿತ ಮಾತ್ರೆಗಳ ನ್ನು ವಿತರಿಸಿದರು. ಆರೋಗ್ಯ ವನ್ನು ಕಾಪಾಡಿಕೊಳ್ಳಲು ನೀಡಿದ ಸಲಹೆಗಳನ್ನು ಪಾಲಿಸುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಮಾದೇವಿ, ಹೆಲ್.ಪಿ.ಜಿ.ಇಂಡಿಯ ರಾಯಚೂರುನ ಹನುಮಂತ, ಆಪ್ತ ಸಮಾಲೋಚಕರಾದ ಗಿರಿಜಾ, ಪ್ರಯೋಗ ಶಾಲಾ ತಜ್ಞರಾದ ಸಂಗಮೇಶ, ಡಿಇಒ ಪ್ರಾಣೇಶ, ಬಿ.ಎಫ್.ಟಿ ಇಮಾನವೇಲ್ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿ ಮತ್ತು ನೂರಾರು ಕೂಲಿಕಾರರು ಉಪಸ್ಥಿತರಿದ್ದರು.

# ಕುಪ್ಪಿಗುಡ್ಡ ಸಿದ್ಧಿವೀರಾಂಜನೇಯ ಮೂರ್ತಿ ದುಷ್ಕರ್ಮಿಗಳಿಂದ ಧ್ವಂಸ: ಪ್ರಕರಣ ದಾಖಲು

ಸಂಜೆಯಾದರೆ ಸಾಕು ಅಶ್ರಮದಲ್ಲಿ ಕುಡುಕರ ಹಾವಳಿ ಹೆಚ್ಚಾಗುತ್ತದೆ. ಕೆಲವು ವರ್ಷಗಳ ಹಿಂದೆ ಸರ್ಜಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಕಂಪ್ಯೂಟರ್‌ಗಳನ್ನು ಕಳ್ಳತನ ಮಾಡಲಾಗಿತ್ತು. ಹೀಗಾಗಿ ಘಟನಾ ಸ್ಥಳಕ್ಕೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಇಲಾಖೆ ರಾತ್ರಿ ವೇಳೆ ಗಸ್ತು ವ್ಯವಸ್ಥೆ ಮಾಡಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಘಟನಾ ಸ್ಥಳಾಕ್ಕೆ ಡಿವೈಎಸ್‌ಪಿ ದತ್ತಾತ್ರೇಯ ಕರ್ನಾಡ್, ಹಟ್ಟಿ ಪಿಐ ಹೊಸಕೇರಪ್ಪ ಪಿಎಸ್‌ಐ ಮಾದಪ್ಪ ಬೇಟಿ ನೀಡಿ ಪರಿಶೀಲಸಿದರು.

# ಅಸ್ಸಾಂನಲ್ಲಿ 1500 ಕೆಜಿ ಡ್ರಗ್ಸ್ ವಶ




**ಗುವಾಹಟಿ,ಮೇ.18–** ಅಸ್ಸಾಂ ಪೊಲೀಸರು ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಸುಮಾರು 1,500 ಕೆಜಿ ನಿಷಿದ್ಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

ಎಕ್ಸ್ ನಲ್ಲಿ ಎರಡು ಪ್ರಮುಖ ಬಂಧನಗಳ ವಿವರಗಳನ್ನು ಹಂಚಿಕೊಂಡ ಶರ್ಮಾ, ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ, 3 ಕೋಟಿ ರೂ. ಮೌಲ್ಯದ 512.58 ಗ್ರಾಂ ಹೆರಾಯಿನ್ ಅನ್ನು ವಶಪಡಿಸಿಕೊಂಡಿದೆ ಮತ್ತು 3 ಜನರನ್ನು ಬಂಧಿಸಿದೆ ಎಂದು ಹೇಳಿದರು.

ಕೊಕ್ರಜಾರ್ ಪೊಲೀಸರು ನಡೆಸಿದ ಮತ್ತೊಂದು ಕಾರ್ಯಾಚರಣೆಯಲ್ಲಿ, 963.19 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು. ಮಾದಕ ವಸ್ತುಗಳ ವಿರುದ್ಧ ನಮ್ಮ ನಿರಂತರ ಅನ್ವೇಷಣೆ ಮುಂದುವರಿಯುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

# ಸಾಗುವಾನಿ ಮರ ಕಳವು:ಪರಿಹಾರಕ್ಕೆ ಆಗ್ರಹ

**ಕಾಳಗಿ :ಮೇ.18–** ಪಟ್ಟಣದ ನಿವಾಸಿ ಭೀಮರಾಯ ಮಲಘಾಣ ಅವರ ಜಮೀನಲ್ಲಿ ಬೆಳೆದ ಸಾಗುವಾನಿ ಮರಗಳನ್ನು ಕಳ್ಳರು ದೋಚಿ ಪರಾರಿಯಾಗಿದ್ದಾರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿ ಸರಕಾರದಿಂದ ಕೂಡಲೇ ಪರಿಹಾರ ನೀಡಬೇಕೆಂದು ತಾಲೂಕು ರೈತ ಸೇನೆ ಅಧ್ಯಕ್ಷ ವೀರಣ್ಣ ಗಂಗಾಣಿ ಹೇಳಿದರು

ಭೀಮರಾಯ ಮಲಘಾಣ ಅವರಿಗೆ ಸೇರಿದ ಜಮೀನಿನಲ್ಲಿ ಸುಮಾರು 300 ಸಾಗುವಾನಿ ಮರಗಳನ್ನು ಬೆಳೆಸಲಾಗಿದೆ. ಚಿತ್ತಾಪೂರ ಅರಣ್ಯ ಇಲಾಖೆಯವರು 300 ಸಾಗುವಾನಿ ಸಸಿಗಳನ್ನು ನೀಡಿದ್ದರು. ಸರ್ವೆ ನಂ. 16 ರಲ್ಲಿ ಜಮೀನಿನಲ್ಲಿ 300 ಸಾಗುವಾನಿ ಸಸಿಗಳನ್ನು ನೆಡಲಾಗಿತ್ತು. 5ವರ್ಷ ಪ್ರಾಯದ ಅಂದಾಜು 30 ಸಾವಿರ ಮೌಲ್ಯದ 13 ಸಾಗುವಾನಿ ಮರಗಳನ್ನು ಕಳ್ಳರು ಕಡಿದು ಕಳ್ಳತನ ಮಾಡಿಕೊಂಡು ಹೋಗಿರುವುದು ಬೆಳಕಿಗೆ ಬಂದಿದೆ.

ಎಂದಿನಂತೆ ಗುರುವಾರ ಬೆಳಿಗ್ಗೆ ಹೊಲಕ್ಕೆ ಹೋದಾಗ 13 ಸಾಗುವಾನಿ ಮರಗಳನ್ನು ಕಡಿದುಕೊಂಡು ಹೋಗಿರುವುದು ಕಂಡುಬಂದಿದೆ.ಚಿತ್ತಾಪೂರ ಅರಣ್ಯ ಇಲಾಖೆ ಸಹಕಾರದಿಂದ ನಮ್ಮ ಜಮೀನಿನಲ್ಲಿ ಸುಮಾರು 300 ಸಾಗುವಾನಿ ಸಸಿಗಳನ್ನು ನೆಡಲಾಗಿದೆ. 5 ವರ್ಷ ಪ್ರಾಯದ 13 ಸಾಗುವಾನಿ ಮರಗಳನ್ನು ಅಂದಾಜು 30 ಸಾವಿರ ಮೌಲ್ಯದ ಮರಗಳನ್ನು ಕಳ್ಳರು ಕಡಿದುಕೊಂಡು ಹೋಗಿದ್ದಾರೆ. ಉಳಿದ ಸಾಗುವಾನಿ ಮರಗಳಿಗೆ ರಕ್ಷಣೆ ಒದಗಿಸಬೇಕು, ಹಾಗೂ ಪರಿಹಾರ ನೀಡಬೇಕು ಎಂದರು.

# ಸಚಿವ ಸ್ಥಾನ ನೀಡುವ ಭರವಸೆ ಕೊಟ್ಟು ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಕರೆತಂದರು : ಶಾಸಕ ಶಿವಲಿಂಗೇಗೌಡ

**ಹಾಸನ, ಮೇ 18–** ತಮ್ಮನ್ನು ಜೆಡಿಎಸ್‌ನಿಂದ ಕಾಂಗ್ರೆಸ್ ಪಕ್ಷಕ್ಕೆ ಕರೆತರಲಾಗಿದೆ. ಎರಡೂವರೆ ವರ್ಷದ ಬಳಿಕ ಸಚಿವ ಸ್ಥಾನ ನೀಡುತ್ತೇನೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ ಎಂದು ಅರಸೀಕೆರೆ ಕ್ಷೇತ್ರದ ಶಾಸಕ ಕೆ.ಎಂ.ಶಿವಲಿಂಗೇಗೌಡ ಹೇಳಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಮ್ಮನ್ನು ಕಾಂಗ್ರೆಸ್‌ಗೆ ಕರೆತರುವಾಗ ನೀಡಿದ್ದ ಭರವಸೆಯಲ್ಲಿ ಮುಚ್ಚುಮರೆ ಏನಿಲ್ಲ. ಸಚಿವರನ್ನಾಗಿ ಮಾಡುವುದಾಗಿ ಸಿದ್ದರಾಮಯ್ಯನವರು ಭರವಸೆ ಕೊಟ್ಟಿದ್ದರು. ಎರಡೂವರೆ ವರ್ಷದ ಬಳಿಕ ಸಚಿವನನ್ನಾಗಿ ಮಾಡುವುದಾಗಿ ಸಾರ್ವಜನಿಕ ವೇದಿಕೆಗಳಲ್ಲೂ ಇದನ್ನು ತಿಳಿಸಿದ್ದಾರೆ ಎಂದರು.

ಜಿಲ್ಲೆಗೆ ಪಕ್ಷದ ಹಿತದೃಷ್ಟಿಯಿಂದ ಸಚಿವ ಸ್ಥಾನ ನೀಡಬೇಕು ಎಂಬ ರಾಜಕೀಯ ಲೆಕ್ಕಾಚಾರಗಳು ಇವೆ. ಗೆದ್ದಿರುವುದು ನಾನೊಬ್ಬನೇ. ಹೀಗಾಗಿ ಸಚಿವ ಸ್ಥಾನ ನೀಡುವ ವಿಶ್ವಾಸವಿದೆ. ಸದ್ಯಕ್ಕೆ ಸಮಯ ಕೂಡಿಬಂದಿಲ್ಲ. ಸಂಪುಟ ಪುನರ್ರಚನೆಯಾಗಿಲ್ಲ ಎಂದು ಅವರು ಹೇಳಿದರು.

ಸಿದ್ದರಾಮಯ್ಯನವರ ವಿರುದ್ಧ ಯಾರು, ಎಷ್ಟೇ ಬಾಯಿ ಬಡಿದುಕೊಂಡರೂ ಏನೂ ಮಾಡಲಾಗುವುದಿಲ್ಲ. 5 ವರ್ಷ ಸಿದ್ದರಾಮಯ್ಯ ಸುಭದ್ರ ಸರ್ಕಾರ ನಡೆಸುತ್ತಾರೆ. ಹಣಕಾಸಿನ ಕೊರತೆ ಇದೆ ಎಂಬುದಲ್ಲೇ ಸುಳ್ಳು. ಅರಸೀಕೆರೆ ಕ್ಷೇತ್ರವೊಂದಕ್ಕೆ ಕೋಟ್ಯಂತರ ರೂಪಾಯಿ ಅನುದಾನ ನೀಡಲಾಗಿದೆ. ಯಾವ ಅಭಿವೃದ್ಧಿ ಕೆಲಸಗಳೂ ನಿಂತಿಲ್ಲ. 56 ಸಾವಿರ ಕೋಟಿ ರೂ.ಗಳ ಗ್ಯಾರಂಟಿ ಯೋಜನೆಗಳನ್ನೂ ಯಶಸ್ವಿಯಾಗಿ ಜಾರಿಗೆ ತರಲಾಗಿದೆ. ಪ್ರತಿ ಮನೆಗೆ ತಿಂಗಳಿಗೆ 5 ಸಾವಿರ ರೂ.ಗಳು ಮನೆ ಬಾಗಿಲಿಗೆ ತಲುಪುತ್ತಿವೆ ಎಂದರು.

# ಅಕ್ರಮವಾಗಿ ಜಾನುವಾರು ತ್ಯಾಜ್ಯ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

**ಕಲಬುರಗಿ,ಮೇ.18–**ಪಿಕಪ್ ವಾಹನದಲ್ಲಿ ಅಕ್ರಮವಾಗಿ ಜಾನುವಾರು ತ್ಯಾಜ್ಯ (ಮೂಳೆ ಇತ್ಯಾದಿ) ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪಿಐ ಸುಶೀಲಕುಮಾರ, ಸಿಬ್ಬಂದಿಗಳಾದ ಈರಣ್ಣ, ಜೈಭೀಮ ಅವರು ದಾಳಿ ನಡೆಸಿ ವ್ಯಕ್ತಿಯೊಬ್ಬನನ್ನು ಬಂಧಿಸಿ ಪಿಕಪ್ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 2 ರಿಂದ 3 ಟನ್ ಜಾನುವಾರು ತ್ಯಾಜ್ಯ ಜಪ್ತಿ ಮಾಡಿದ್ದಾರೆ.

ಗರಿಬ್ ನವಾಜ್ ಕಾಲೋನಿಯ ತೌಫಿಕ್ ತಂದೆ ಯುಸೂಫ್ ಅಲಿ (31) ಎಂಬಾತನನ್ನು ಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಈತ ನೂರಾನಿ ಮಹೋಲ್ಲಾದಲ್ಲಿರುವ ಜಬ್ಬಾರ್ ಖುರೇಶಿ ಅವರ ಖುಲ್ಲಾ ಪ್ಲಾಟ್‌ನಲ್ಲಿರುವ ಜಾನುವಾರುಗಳ ತ್ಯಾಜ್ಯವನ್ನು ತುಂಬಿಕೊಂಡು ಯಾದಗಿರಿ ಜಿಲ್ಲೆಯ ಕಂಪನಿಗೆ ಸಾಗಾಣಿಕೆ ಮಾಡುತ್ತಿದ್ದ ಎಂದು ತಿಳಿದುಬಂದಿದೆ.ಈ ಸಂಬಂಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

# ಡಿಕೆ ಸುರೇಶ್‌ಗೆ ಕೆಎಂಎಫ್ ಅಧ್ಯಕ್ಷಗಿರಿ ವೇದಿಕೆ ಸಜ್ಜು

**ಬೆಂಗಳೂರು, ಮೇ 18–** ಕರ್ನಾಟಕ ಹಾಲು ಮಹಾಮಂಡಳದ ಮುಂದಿನ ಅಧ್ಯಕ್ಷರಾಗಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹೋದರ ಹಾಗೂ ಮಾಜಿ ಸಂಸದ ಡಿ.ಕೆ. ಸುರೇಶ್ ರವರನ್ನು ಆಯ್ಕೆ ಮಾಡಲು ವೇದಿಕೆ ಅಣಿಯಾಗಿದೆ.






ಕೆಎಂಎಫ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಮಾಜಿ ಸಂಸದ ಡಿ.ಕೆ. ಸುರೇಶ್ ಅವರು ಇಂದು ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ನಡೆಯುವ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದಾರೆ.ಕರ್ನಾಟಕ ಹಾಲು ಮಹಾಮಂಡಲದ ಹಾಲಿ ಅಧ್ಯಕ್ಷರಾಗಿರುವ ಮಾಜಿ ಶಾಸಕ ಭೀಮನಾಯಕ್ ಅವರ ಅವಧಿ ಜೂನ್‌ನಲ್ಲಿ ಅಂತ್ಯಗೊಳ್ಳಲಿದ್ದು, ನಂತರ ಈ ಅಧ್ಯಕ್ಷ ಗಾದಿಯನ್ನು ಡಿ.ಕೆ. ಸುರೇಶ್ ಅಲಂಕರಿಸಲಿದ್ದಾರೆ ಎಂಬ ಮಾತುಗಳಿಗೆ ಪುಷ್ಠಿ ಕೊಡುವಂತೆ ಡಿ.ಕೆ. ಸುರೇಶ್ ಅವರು ಇಂದು ಬೆಂಗಳೂರು ಹಾಲು ಮಹಾಮಂಡಲದ ನಿರ್ದೇಶಕ ಸ್ಥಾನಕ್ಕೆ ನಡೆಯುವ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ಕೆಎಂಎಫ್‌ನ ಅಧ್ಯಕ್ಷ ಗಾದಿಯ ಮೇಲೆ ಕಣ್ಣಿಟ್ಟೆ ಡಿ.ಕೆ. ಸುರೇಶ್ ಅವರು ಬೆಂಗಳೂರು ಹಾಲು ಮಹಾಮಂಡಲದ ನಿರ್ದೇಶ ಸ್ಥಾನದ ಚುನಾವಣಾ ಕಣಕ್ಕೆ ಇಳಿದಿದ್ದಾರೆ ಎಂದು ಹೇಳಲಾಗಿದೆ.ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಹೊಸದರಲ್ಲೇ ಕೆಎಂಎಫ್ ಅಧ್ಯಕ್ಷ ಗಾದಿಗೆ ಡಿ.ಕೆ. ಸುರೇಶ್ ರವರನ್ನು ಪರಿಗಣಿಸುವ ಪ್ರಸ್ತಾಪಗಳು ಇದ್ದವು. ಆಗ ಅವರು ಸಂಸದರಾಗಿದ್ದ ಕಾರಣ ಮಾಜಿ ಶಾಸಕ ಭೀಮನಾಯಕ್‌ರವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು.

ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಡಿ.ಕೆ. ಸುರೇಶ್ ಅವರು ಬಿಜೆಪಿಯ ಡಾ. ಸಿ.ಎನ್. ಮಂಜುನಾಥ್ ವಿರುದ್ಧ ಪರಾಭವಗೊಂಡಿದ್ದರು. ಇದಾದ ಬಳಿಕ ಅವರನ್ನು ಕೆಎಂಎಫ್ ಅಧ್ಯಕ್ಷರನ್ನಾಗಿ ಮಾಡಬೇಕು ಎಂಬ ಒತ್ತಡಗಳು ಕಾಂಗ್ರೆಸ್‌ನಲ್ಲಿ ಇದ್ದವು.ಹಾಲಿ ಅಧ್ಯಕ್ಷ ಭೀಮನಾಯಕ್ ಅವಧಿ ಪೂರ್ಣಗೊಳ್ಳದ ಕಾರಣ ಡಿ.ಕೆ. ಸುರೇಶ್ ಅವರನ್ನು ಕೆಎಂಎಫ್ ಅಧ್ಯಕ್ಷ ಗಾದಿಗೆ ಆಯ್ಕೆ ಮಾಡುವುದು ಮುಂದಕ್ಕೆ ಹೋಗಿತ್ತು. ಈಗ ಭೀಮನಾಯಕ್ ಅವಧಿ ಅಂತ್ಯವಾಗುತ್ತಿರುವ ಹಿನ್ನೆಲೆಯಲ್ಲಿ ಡಿ.ಕೆ. ಸುರೇಶ್ ಅವರನ್ನು ಕೆಎಂಎಫ್ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲು ವೇದಿಕೆ ಅಣಿಯಾಗಿದೆ. ಈ ನಿಟ್ಟಿನಲ್ಲಿ ಡಿ.ಕೆ. ಸುರೇಶ್ ಅವರು ಕನಕಪುರ ಭಾಗದಿಂದ ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕರಾಗಿ ಆಯ್ಕೆಯಾದ ನಂತರ ಮುಂದೆ ಜುಲೈನಲ್ಲಿ ನಡೆಯುವ ಕೆಎಂಎಫ್ ಅಧ್ಯಕ್ಷ ಚುನಾವಣೆಯಲ್ಲಿ ಡಿ.ಕೆ. ಸುರೇಶ್ ಅಭ್ಯರ್ಥಿಯಾಗಲಿದ್ದಾರೆ.ಕೆಎಂಎಫ್‌ನಲ್ಲಿ ಕಾಂಗ್ರೆಸ್ ಬೆಂಬಲಿತ ನಿರ್ದೇಶಕರುಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಡಿ.ಕೆ. ಸುರೇಶ್ ಮುಂದೆ ಕೆಎಂಎಫ್ ಅಧ್ಯಕ್ಷರಾಗಿ ಆಯ್ಕೆಯಾಗುವುದು ಬಹುತೇಕ ನಿಶ್ಚಿತ.

**ಡಿಕೆಎಸ್ ಹೇಳಿಕೆ:** ಬೆಂಗಳೂರು ಹಾಲು ಒಕ್ಕೂಟದ ಚುನಾವಣೆಯಲ್ಲಿ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸುತ್ತಿರುವ ಡಿ.ಕೆ. ಸುರೇಶ್ ಇಂದು ಬೆಳಿಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ಪಕ್ಷದ ನಾಯಕರು ಹಾಗೂ ಕಾರ್ಯಕರ್ತರ ಒತ್ತಡದ ಮೇರೆಗೆ ಬೆಂಗಳೂರು ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಸಲ್ಲಿಸುತ್ತಿದ್ದೇನೆ ಎಂದು ಹೇಳಿದರು. ಲೋಕಸಭಾ ಚುನಾವಣೆಯ ನಂತರ ನಾನು ವಿಶ್ರಾಂತಿಯ ಮನಸ್ಥಿತಿಯಲ್ಲಿದ್ದೆ. ಆದರೆ ಪಕ್ಷದ ನಾಯಕರು ಹಾಗೂ ಮುಖಂಡರುಗಳು ಒತ್ತಡ ಹೇರಿದ್ದು, ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ನಾಮಪತ್ರ ಹಾಕುವಂತಾಗಿದೆ ಎಂದು ಹೇಳಿದರು.

ಕೆಎಂಎಫ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟು ಹಾಲು ಒಕ್ಕೂಟದ ಚುನಾವಣೆಗೆ ಸ್ಪರ್ಧಿಸುತ್ತಿದ್ದೀರಾ ಎಂಬ ಪ್ರಶ್ನೆಗೆ ಕೆಎಂಎಫ್ ಅಧ್ಯಕ್ಷ ಸ್ಥಾನ ಖಾಲಿ ಇಲ್ಲ. ಪಕ್ಷದ ನಾಯಕರು ಹಾಗೂ ಮುಖಂಡರುಗಳು ತಮ್ಮ ಮೇಲೆ ಒತ್ತಡ ಹೇರುವ ಜತೆಗೆ ಬೆಂಗಳೂರು ಹಾಲು ಒಕ್ಕೂಟ ವ್ಯಾಪ್ತಿಯ ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರುಗಳು ಒತ್ತಡ ಹಾಕಿದ್ದರಿಂದ ಚುನಾವಣೆಗೆ ಸ್ಪರ್ಧಿಸುತ್ತಿದ್ದೇನೆ. ಪಕ್ಷದ ನಾಯಕರುಗಳ ತೀರ್ಮಾನದಂತೆ ಪಕ್ಷದ ಕಾರ್ಯಕರ್ತನಾಗಿ ಅವರ ತೀರ್ಮಾನಗಳನ್ನು ಒಪ್ಪಿಕೊಂಡು ಹಾಲು ಒಕ್ಕೂಟದ ಚುನಾವಣೆಯ ಕಣಕ್ಕೆ ಇಳಿದಿದ್ದೇನೆ. ಕೆಎಂಎಫ್ ಅಧ್ಯಕ್ಷ ಸ್ಥಾನದ ಬಗ್ಗೆ ನಾವು ಯಾವುದೇ ಚರ್ಚೆಯನ್ನು ನಡೆಸಿಲ್ಲ. ಎಲ್ಲವನ್ನು ಪಕ್ಷ ತೀರ್ಮಾನಿಸುತ್ತದೆ ಎಂದು ಹೇಳಿದರು.

# ಮರೆತೇನೆಂದರೆ ಮರೆಯಲಿ ಹ್ಯಾಂಗ....ಬಾಲ್ಯದ ಸವಿ ನೆನಪುಗಳ

ಇಂದಿನ ರಜಾದಿನಗಳಲ್ಲಿ ಮನೆಮನೆಗಳಲ್ಲೂ ರಜೆಯ ಮಜ ಸವಿಯುತ್ತಿರುವ ಮಕ್ಕಳು. ಮಕ್ಕಳ ಚೀರಾಟ, ಹಾರಾಟ, ಜಗಳ,ಗದ್ದಲ ಕೋಲಾಹಲಗಳಿಂದ ಕಂಗೆಟ್ಟಿರುವ ಪಾಲಕರು. ಮನೆಯ ಹೊರಗಡೆ ಬಿಸಿಲಿನ ತಾಪವಾದರೆ ಮನೆಯೊಳಗಡೆ ಮಕ್ಕಳ ಪ್ರತಾಪ.ತಾಯಂದಿರು ಕುಕ್ಕರಗಳಾಗಿದ್ದರೆ ಸಿಡಿದು ಹೋಗುತ್ತಿದ್ದರೇನೋ. ಹಿಂದೆ ಹೀಗಿರಲಿಲ್ಲವೇ ಎಂದು ಯೋಚಿಸಿದರೆ ಮನಸ್ಸು ನಮ್ಮ ಬಾಲ್ಯದ ದಿನಗಳತ್ತ ಓಡಿತು.

ನಮಗೆ ಪ್ರತಿವರ್ಷ ಬೇಸಿಗೆಯಲ್ಲಿ ಎರಡು ತಿಂಗಳ ದೀರ್ಘಾವಧಿಯ ರಜೆ ಮತ್ತು ದಸರೆಯಲ್ಲಿ 15 ರಿಂದ 30 ದಿನಗಳ ಅಲ್ಪಾವಧಿ ರಜೆ ಇರುತ್ತಿತ್ತು.

ಹಿಂದೆ ಅವಿಭಕ್ತ ಕುಟುಂಬಗಳು ಇದ್ದು ರಜೆ ಬಿಟ್ಟೊಡನೆ ನಾವು ಮಕ್ಕಳು ಅಜ್ಜನ ಮನೆಗೆ,ಮಾವನ ಮನೆ, ಚಿಕ್ಕಮ್ಮ ದೊಡ್ಡಮ್ಮರ ಮನೆಗೆ, ಸೋದರತ್ತೆಯ ಮನೆಗೆ ರಜೆಯ ದಿನಗಳನ್ನು ಕಳೆಯಲು ಹೋಗುತ್ತಿದ್ದೆವು. ಹಳ್ಳಿಯ ವಿಶಾಲವಾದ ಬಂಕದ ಮನೆಗಳು, ಹಿತ್ತಲಲ್ಲಿರುವ ದೊಡ್ಡ ದೊಡ್ಡ ಕಟ್ಟೆಗಳು, ಊರ ಮುಂದಿನ ಹೊಳೆ-ಹಳ್ಳಗಳು, ತೋಟಗಳು, ಹೊಲಗದ್ದೆಗಳು, ತೋಪುಗಳು, ದೇವಸ್ಥಾನದ ಆವರಣಗಳು, ಒಂದೇ ಎರಡೇ ನಮಗೆ ಆಟವಾಡಲು. ಬೆಳಿಗ್ಗೆ ಎದ್ದು ಮುಖಮಾರ್ಜನ ಮಾಡಿ ಚಹ ಇಲ್ಲವೇ ಹಾಲನ್ನು ಕುಡಿದು ಟವಲನ್ನು ಸುತ್ತಿ ಕೈಯಲ್ಲಿ ಹಿಡಿದು ಹಿರಿಯರ ಮೇಲುಸ್ತುವಾರಿಯಲ್ಲಿ ಬಾವಿಗೆ ಈಜಲು ತೆರಳುವುದು. ಒಂದೆರಡು ಗಂಟೆಗಳ ಕಾಲ ಈಜು ಮೋಜು ಎಲ್ಲವೂ ಒಟ್ಟಿಗೆ ನಡೆದು ನಂತರ ಬಾವಿಯಿಂದ ಹೊರಗೆ ಬಂದರೆ ಕೈ, ಕಾಲುಗಳ ಬೆರಳುಗಳು ನೀರಿನ ಹೊಡೆತಕ್ಕೆ ಮುದುರಿ ಗಗ್ಗರಿಗಟ್ಟುತ್ತಿದ್ದವು. ನಂತರ ಮನೆಗೆ ಬಂದು ಮತ್ತೊಮ್ಮೆ ಸ್ನಾನ ಮಾಡಿ ತಿಂಡಿ ತಿಂದು

ವಾರಿಗೆಯ ಮಕ್ಕಳೊಡನೆ ಬೀದಿಗಿಳಿದರಾಯಿತು. ಗೋಲಿ, ಮರಕೋತಿಯಾಟ , ಸರಬಡಿಗೆಯಾಟ, ಕಣ್ಣ ಮುಚ್ಚಾಲೆ ಹೆಣ್ಣುಮಕ್ಕಳಾದರೆ ಕುಂಟೆಬಿಲ್ಲೆ ಆಣೆಕಲ್ಲು, ಗಜ್ಜುಗ, ಬಳೆ ಚೂರಿನ ಆಟ ಹೀಗೆ ಹತ್ತು ಹಲವು ಆಟಗಳನ್ನು ಆಡಿ ಮನೆಯವರ ಕೂಗಿಗೆ ಓಗೊಟ್ಟು ಮನೆಗೆ ಬಂದು ಕೈ ಕಾಲು ಮುಖ ತೊಳೆದು ಊಟ ಮಾಡುವುದು. ಹಾಗೆ ಸುಮ್ಮನೆ ಊಟ ಮಾಡುವುದು ಕೂಡ ಮತ್ತೆ ಆಟಕ್ಕೆ ಕಳುಹಿಸಲಿ ಎಂಬ ಬಯಕೆಯಿಂದಲೇ. ಆದರೆ ಹಿರಿಯರು ಸೂರ್ಯನ ಬಿಸಿಲು ಸರಿಯುವವರೆಗೆ ಮನೆಯ ಒಳಗಡೆ ಆಟವಾಡಿಕೊಳ್ಳಬೇಕೆಂದು ಕಟ್ಟಪ್ಪಣೆ ಮಾಡುತ್ತಿದ್ದರು. ಬಿಸಿಲಿನ ಬೇಗೆಯ ನೆಪದಲ್ಲಿ ದೊಡ್ಡವರೆಲ್ಲ ವಿಶ್ರಾಂತಿ ಪಡೆಯಲು ಕೋಣೆ, ಪಡಸಾಲೆಗಳನ್ನು ಸೇರಿದರೆ ಮಕ್ಕಳು ಮನೆಯ ಹಿತ್ತಲಿನ ಕಟ್ಟೆಯ ಮೇಲೆ ಮತ್ತೆ ಜಮಾವಣೆಯಾಗುತ್ತಿದ್ದರು. ನಿದ್ದೆ ಬಾರದ ಅಜ್ಜ ಅಜ್ಜಿ ಈ ಮಕ್ಕಳೊಂದಿಗೆ ಸೇರಿ ಚೌಕಾಬಾರ, ಕವಡೆ,ಹುಲಿಮನೆಗಳನ್ನು ಸೀಮೆಸುಣ್ಣದ ಪೆನ್ಸಿಲಿನಿಂದ ಬರೆದು ಆಟವಾಡುತ್ತಿದ್ದರು. ಕೊಂಚ ದೊಡ್ಡವರಾದ ನಂತರ ಚೆಸ್, ಕೇರಂ ಬೋರ್ಡ್, ಹಾವು ಏಣಿ ಆಟ, ಲುಡೋ, ರಾಜಾ, ರಾಣಿ, ಪೊಲೀಸ್, ಕಳ್ಳ ಮುಂತಾದ ಆಟಗಳಿಗೆ ಬಡ್ತಿ ದೊರೆತದ್ದು ನಿಜ.




ಟಿವಿ, ಮೊಬೈಲ್ಗಳಂತಹ ಯಾವುದೇ ಆಕರ್ಷಣೆಗಳು ನಮಗಿರದ ಕಾಲದಲ್ಲಿ ಪುಸ್ತಕ ನಮಗೆ ಅತ್ಯಂತ ಆತ್ಮೀಯ ಸಂಗಾತಿಯಾಗಿತ್ತು. ಮನೆಯ ಅಟ್ಟದಲ್ಲಿ ಇರುತ್ತಿದ್ದ ಪುಸ್ತಕಗಳನ್ನು ಓರಣವಾಗಿ ಜೋಡಿಸಿಟ್ಟುಕೊಂಡು ಓದಲಾ ರಂಭಿಸಿದರೆ ಊಟ ನಿದ್ರೆಗಳನ್ನು ಕೂಡ ಮರೆಯುವಂತಹ ದಿನ 'ಗಳು. ಚಂದಮಾಮ, ಬಾಲ ಮಿತ್ರ, ತರಂಗ, ಸುಧಾ, ಪ್ರಜಾ ಮತ, ಮಯೂರ, ಕಸ್ತೂರಿ, ತುಷಾರ ಮಾಸಪತ್ರಿಕೆಗಳ ಮಕ್ಕಳ ಪುಟಗಳಲ್ಲದೆ ಕಥೆ ಕಾದಂಬರಿಗಳನ್ನು ಕೂಡ ಓ ದುತ್ತಿದ್ದೆವು.

ಹೊಲಕ್ಕೆ ಹೋದರೆ ಯಾರ ದ್ದೋ ಹೊಲದ ಮಾವಿನಕಾಯಿ, ಪೇರಲಹಣ್ಣು, ಚಿಕ್ಕು ಕಾಯಿಗಳನ್ನು ತಿನ್ನುವ ಬಯಕೆ. ತೆಂಗಿನ ಎಳನೀರನ್ನು ಕುಡಿದು ಹೊಟ್ಟೆ ತುಂಬಿಸಿಕೊಂಡದ್ದು ಉಂಟು. ಮರದಲ್ಲಿ ಸಿಕ್ಕುವ ಹುಣಸೆ ಕಾಯಿ ಆರಿಸಿ ತಂದು ಮನೆಯ ಹಿರಿಯರನ್ನು ಕಾಡಿ ಬೇಡಿ ಉಪ್ಪು ಬೆಲ್ಲ ಜೀರಿಗೆ ಹಾಕಿ ನುಣ್ಣಗೆ ಚಿಗಳಿ ಕುಟ್ಟಿಸಿಕೊಂಡು ತಿನ್ನುವ ಸಂಭ್ರಮ. ನೆಲಗಡಲೆ ಅಥವಾ ಶೇಂಗಾ ಬೀಜ, ನೆನೆ ಹಾಕಿದ ಹುಣಸೆ ಬೀಜಗಳನ್ನು ಹುರಿದು ತಿನ್ನಲು ಒಯ್ಯುತ್ತಿದ್ದುದು ಕೂಡ ವಿಶೇಷವೇ. ಹತ್ತು ಪೈಸೆಗೆ ದೊರೆಯುವ ಕ್ಯಾಂಡಿ, 25 ಪೈಸೆಗೆ ದೊರೆಯುವ ಹಾಲಿನ ಐಸ್ ಕೊಡಿಸಿದರಂತೂ ಸ್ವರ್ಗಕ್ಕೆ ಎರಡೇ ಮೆಟ್ಟಿಲು. ಆದರೆ ಅವು ಕೂಡ ಎಲ್ಲರ ಪಾಲಿಗೆ ದುಬಾರಿ ಹವ್ಯಾಸಗಳು.

ಸಂಜೆ ಮತ್ತೆ ಮನೆಯ ಬಳಿ ಸಾರಿ ಕೈ ಕಾಲು ಮುಖ ತೊಳೆದು ಮನೆಯ ಹಿರಿಯರ ಜೊತೆ ಊರ ಮುಂದಣ ದೇವಸ್ಥಾನಕ್ಕೆ ಹೋಗಿ ದೇವರಿಗೆ ನಮಸ್ಕರಿಸಿ ಹಿರಿಯರು ದೇವಸ್ಥಾನದ ಜಗಲಿಯ ಮೇಲೆ ಕಾಲಕ್ಷೇಪ ಕ್ಕಾಗಿ ಮಾತನಾಡಲು ಕುಳಿತರೆ ದೇವಸ್ಥಾನದ ಆವರಣದಲ್ಲಿ ಮತ್ತೆ ಮಕ್ಕಳ ಕಲರವ. ವಿಶೇಷ ಪೂಜೆಯ ದಿನಗಳಾದರೆ ಪೂಜೆಯ ಪ್ರಸಾದ ವಿನಿಯೋಗ ಮತ್ತು ಪ್ರವಚನ ಕಾರ್ಯಕ್ರಮ. ಈ ಸಮಯದಲ್ಲಿ ಮುಂಜಾನೆಯಿಂದ ಆಡಿ ದಣಿದ ದೇಹಕ್ಕೆ ಪ್ರವಚನಕಾರರ ಮಾತು ಜೋಗುಳದ ಲಾಲಿಯಂತಾಗಿ ಎಷ್ಟೋ ಬಾರಿ ಅಲ್ಲಿಯೇ ಮಲಗಿದ್ದು ಕಾರ್ಯಕ್ರಮ ಮುಗಿದ ನಂತರ ಮನೆಯವರೊಂದಿಗೆ ಮತ್ತೆ ಮನೆಯೆಡೆಗೆ ಪಯಣಿಸಿ ಊಟ ಮಾಡಿ ಮಲಗಿದರೆ ಮತ್ತೆ ಎಚ್ಚರವಾಗುವುದು ಬೆಳಗಾ ಮುಂಜಾನೆ ಹಕ್ಕಿಗಳ ಚಿಲಿಪಿಲಿ ಶಬ್ದ ಕೇಳಿದಾಗಲೇ.

ಒಂದೊಂದು ದಿನ ಮನೆಯಲ್ಲಿ ಅಜ್ಜಿ ಮಕ್ಕಳಿಗೆ ಕೈ ತುತ್ತು ಹಾಕುತ್ತಾ ಕಥೆ ಹೇಳಿದರೆ

ಕಂಗಳರಳಿಸಿ ಹೊಟ್ಟೆ ಭಾರವಾಗುವುದರ ಅರಿವು ಕೂಡ ಆಗದಷ್ಟು ಕಥೆಯಲ್ಲಿ ಮುಳುಗಿ ಹೋಗುತ್ತಿದ್ದರು. ಕಥೆ, ಒಗಟು,ಗಾದೆ ಮಾತುಗಳನ್ನು, ಹಾಡಿನ ಬಂಡಿ(ಅಂತಾಕ್ಷರಿ)ಯನ್ನು ಚಲನಚಿತ್ರಗಳ ಹೆಸರು ಹೇಳುವ ಸ್ಪರ್ಧೆ ಹೀಗೆ ಹತ್ತು ಹಲವಾರು ಸ್ಪರ್ಧೆಗಳನ್ನು ನಾವುಗಳೇ ಆಯೋಜಿಸಿ ಆಡುತ್ತಿದ್ದೆವು.

ಇನ್ನು ಕೆಲವೊಮ್ಮೆ ಹಪ್ಪಳ, ಉಪ್ಪಿನಕಾಯಿ, ಸಂಡಿಗೆ ತಯಾರಿಯಲ್ಲಿ ಮನೆಯ ಹಿರಿಯರು ತೊಡಗಿದಾಗ ಅವರಿಗೆ ಗೊತ್ತಿಲ್ಲದಂತೆ ಉಪ್ಪಿನಕಾಯಿಗೆ ಹೆಚ್ಚಿದ ಹೋಳುಗಳನ್ನು ಕದ್ದು ತಂದು ಅದಕ್ಕೆ ಕಾರ ಉಪ್ಪು ಹಚ್ಚಿ ಸವಿಯುವುದು, ಸಂಡಿಗೆ ಹಾಕಿದ ನಂತರ ಉಳಿದ ಗಟ್ಟಿಯಾದ ಸಂಡಿಗೆ ಹಿಟ್ಟನ್ನು ತಿನ್ನುವುದು ಹಪ್ಪಳದ ಹಿಟ್ಟನ್ನು ಹಸಿಯಾಗಿಯೇ ತಿನ್ನುವುದು ಹೆಣ್ಣು ಮಕ್ಕಳಾದರೆ ಹಪ್ಪಳ ಸಂಡಿಗೆಗಳ ತಯಾರಿಯಲ್ಲಿ ಸಂಡಿಗೆ ಹಾಕುವುದು ಹಪ್ಪಳ ಲಟ್ಟಿಸುವುದನ್ನು ಕಲಿಯುತ್ತಿದ್ದರು.

ಇನ್ನು ರಜೆಯ ಸಮಯದಲ್ಲಿ ಮನೆಗಳಲ್ಲಿ ಮದುವೆ ಸಂಭ್ರಮವಿದ್ದರೆ ಆ ಮಾತೇ ಬೇರೆ. ಹಿರಿಯರೊಂದಿಗೆ ಜವಳಿ ಖರೀದಿಯಿಂದ ಹಿಡಿದು ಮನೆಗೆ ಬೇಕಾಗುವ ಎಲ್ಲ ಖರೀದಿ ಕಾರ್ಯಕ್ರಮಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ, ನಮಗೂ ಬಟ್ಟೆ ಬರೆ ಕೊಡಿಸಿದರೆ ಸಂಭ್ರಮ ಇನ್ನೂ ದುಪ್ಪಟ್ಟಾಗುವುದು. ಸೀಮಂತ ಕಾರ್ಯ, ನಾಮಕರಣ ಜವಳ, ದೈವ ದರ್ಶನ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳು ರಜೆಯ ದಿನಗಳಲ್ಲಿ.

ಬೇಸಿಗೆಯ ದಿನಗಳಲ್ಲಿ ಜಾತ್ರೆಗಳು, ರಥೋತ್ಸವಗಳು ಹೆಚ್ಚಾಗಿ ನಡೆಯುತ್ತವೆ. ರಥೋತ್ಸವದ ದಿನ ಮುಂಜಾನೆ ದೇಗುಲಕ್ಕೆ ನೈವೇದ್ಯವನ್ನು ಅರ್ಪಿಸಿ, ಅಲ್ಲಿಯ ಸಾಮೂಹಿಕ ಭೋಜನದಲ್ಲಿ ಪ್ರಸಾದವನ್ನು ಸ್ವೀಕರಿಸಿ ಮನೆಗೆ ಬರುತ್ತಾರೆ. ಸಂಜೆ ಹೊಸ ಬಟ್ಟೆಗಳನ್ನು ಧರಿಸಿ ರಥೋತ್ಸವಕ್ಕೆ ಹೋಗುತ್ತಿದ್ದೆವು.ಅಲ್ಲಿ ಉತ್ಸವ ಮೂರ್ತಿಯನ್ನು ಹೊತ್ತ ತೇರು ಸಾಗುತ್ತಿದ್ದರೆ ಉತ್ತತ್ತಿ ಬಾಳೆಹಣ್ಣುಗಳನ್ನು ತೇರಿನಲ್ಲಿರುವ ದೇವರ ಉತ್ಸವ ಮೂರ್ತಿಗೆ ಎಸೆದು ಕೈ ಮುಗಿಯಬೇಕು. ಇಲ್ಲಿಯೂ ಮಕ್ಕಳಿಗೆ ಒಂದು ಪೈಪೋಟಿ. ತೇರಿನತ್ತ ಬೀಸಿದ ಉತ್ತತ್ತಿ ಮತ್ತು ಬಾಳೆಹಣ್ಣುಗಳನ್ನು ಯಾರು ಹೆಚ್ಚು ಸಂಪಾದಿಸುತ್ತಾರೆ ಎಂದು!!

ಜಾತ್ರೆಯ ಗಲಾಟೆ ತುಸು ಕರಗಿದ ಮೇಲೆ ಮಿರ್ಚಿ, ಮಂಡಕ್ಕಿ, ಬದನೆಕಾಯಿ ಬೋಂಡಾ ಸವಿಯುವುದು. ತರಹೆವಾರಿ ಸಿಹಿಗಳು, ಬೆಂಡು ಬೆತ್ತಾಸ, ಕಬ್ಬಿನ ಹಾಲು ಐಸ್ ಕ್ರೀಮ್ ಮತ್ತಿತರ ಬಗೆಯ ಬಗೆಯ ದೋಸೆ ಇಡ್ಲಿ ಸಾಲುಗಳು ಗೋಬಿ ಮಂಚೂರಿ ಮತ್ತಿತರ ವಿವಿಧ ಬಗೆಯ ಚೈನಿಸ್ ತಿಂಡಿಗಳ ಪೂರೈಕೆ, ಸಾಲು ಸಾಲುಗಳಲ್ಲಿ ಖರೀದಿಸುತ್ತಿರುವ ಜನಗಳು,

ನಮಗೆ ಇಷ್ಟವಾದ ಆಟದ ಸಾಮಾನುಗಳನ್ನು ಪೀ ಪೀ, ಬಲೂನು, ಗಿರಗಿಟ್ಟಿಗಳನ್ನು ಕೊಂಡು ಹರ್ಷಿಸುವ ನಾವು ಅವುಗಳನ್ನು ತೆಗೆದುಕೊಂಡು ಮತ್ತೆ ಮರಳಿ ಮನೆಗೆ ಹೊರಟರೆ ಅಂದಿನ ರಥೋತ್ಸವ ಕಾರ್ಯಕ್ರಮ ಸಾಂಗವಾದಂತೆಯೆ ಸರಿ.

ಹೀಗೆ ಯಾವುದೇ ಚಿಂತೆ ಅಡ್ಡಿ ಆತಂಕಗಳಿಲ್ಲದೆ ರಜಾ ದಿನಗಳನ್ನು ಕಳೆದು ನೆನಪಿನ ಬುತ್ತಿಗೆ ಮತ್ತಷ್ಟು ಸವಿ ನೆನಪುಗಳನ್ನು ಸೇರಿಸಿ ಎಲ್ಲರಿಗೂ ಮತ್ತೆ ಮುಂದಿನ ರಜೆಯಲ್ಲಿ ಸಿಗುವ ವಾಗ್ದಾನ ಮಾಡಿ ಊರಿನಡೆಗೆ ಮುಖ ಮಾಡುತ್ತಿದ್ದೆವು. ಎಷ್ಟು ಚಂದ ಬಾಲ್ಯದ ಆ ದಿನಗಳು..... ಮರೆತೇನೆಂದರೆ ಮರೆಯಲಿ ಹ್ಯಾಂಗ. ಎಲ್ಲರೂ ಮರಳಿ ಮತ್ತೆ ಏನನ್ನಾದರೂ ಬಯಸಿದರೆ ಅದು ಅವರ ಬಾಲ್ಯ.....,ಮತ್ತೆ ಮತ್ತೆ ಸವಿಯಬೇಕೆನಿಸುವ ಆ ಬಾಲ್ಯದ ದಿನಗಳನ್ನು ಹಿಂದಿಯ ಪ್ರಸಿದ್ಧ ಕವಿ ಸುಮಿತ್ರಾ ನಂದನ್ ಪಂತ್ ಹೀಗೆ ಹೇಳಿದ್ದಾರೆ

**'ಬಾರ್ ಬಾರ್ ಆತೀ ಹೈ ಮುಜಕೋ**

**ಮಧುರ ಯಾದ ಬಚಪನ್ ತೇರಿ**

**ಗಯಾ ಲೆ ಗಯಾ ತು ಜೀವನ್ ಕೀ**

**ಸಬ ಸೆ ಮಧುರ ಖುಷಿ ಮೇರಿ.......**

**- ವೀಣಾ ಹೇಮಂತ್ ಗೌಡ ಪಾಟೀಲ್**
**ಮುಂಡರಗಿ ಗದಗ**

## ಏರ್ ಇಂಡಿಯಾ ವಿಮಾನದಲ್ಲಿ ದೇವೇಗೌಡರ ಹುಟ್ಟುಹಬ್ಬದ ಸಂಭ್ರಮ



**ಬೆಂಗಳೂರು, ಮೇ 18-** ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ನಾಳೆ 92 ವಸಂತಗಳನ್ನು ಪೂರ್ಣಗೊಳಿಸಿ 93ನೇ ವರ್ಷಕ್ಕೆ ಪದಾರ್ಪಣೆ ಮಾಡಲಿದ್ದಾರೆ. ಗೌಡರು ತಮ್ಮ ಹುಟ್ಟುಹಬ್ಬದ ಅಂಗವಾಗಿ ನಾಳೆ ಮುಂಜಾನೆ ತಿರುಮಲದ ವೆಂಕಟೇಶ್ವರ ಸ್ವಾಮಿ ದರ್ಶನ ಪಡೆಯಲಿದ್ದಾರೆ.

ಇಂದು ಸಂಜೆ ಹೆಚ್ ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ತಿರುಪತಿಗೆ ಪ್ರಯಾಣ ಮಾಡಲಿದ್ದಾರೆ. ದೇವೇಗೌಡರ ಧರ್ಮಪತ್ನಿ ಚೆನ್ನಮ್ಮ ದೇವೇಗೌಡರು ಸೇರಿದಂತೆ ಅವರ ಕುಟುಂಬದ 20ಕ್ಕೂ ಹೆಚ್ಚು ಸದಸ್ಯರು ದೇವೇಗೌಡರೊಂದಿಗೆ ತಿರುಪತಿಗೆ ತೆರಳಲಿ ದ್ದಾರೆ.ಇಂದು ರಾತ್ರಿ ತಿರುಮಲದಲ್ಲಿ ವಾಸ್ತವ್ಯ ಇರಲಿರುವ ಗೌಡರು ಮತ್ತು ಕುಟುಂಬದವರು ಮುಂಜಾನೆ ವೆಂಕಟೇಶ್ವರಸ್ವಾಮಿ ದರ್ಶನ ಪಡೆಯಲಿದ್ದಾರೆ. ನಂತರ ಅತಿಥಿಗೃಹವೊಂದನ್ನು ಉದ್ಘಾಟನೆ ಮಾಡಲಿದ್ದಾರೆ. ನಾಳೆ ಬೆಳಿಗ್ಗೆ ಗೌಡರು ಬೆಂಗಳೂರಿಗೆ ಮರಳುವ ಕಾರ್ಯಕ್ರಮವಿದೆ.

ಮೃತ್ಯುಂಜಯ ಹೋಮ: ದೇವೇಗೌಡರ 93ನೇ ಹುಟ್ಟುಹಬ್ಬದ ಪ್ರಯುಕ್ತ ಬೆಂಗಳೂರು ಮಹಾನಗರ ಜನತಾದಳ ಜೆಡಿಎಸ್ ಹಾಗೂ ಮಹಿಳಾ ವಿಭಾಗದ ವತಿಯಿಂದ ಮಲ್ಲೇಶ್ವರದ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ನಾಳೆ ಬೆಳಿಗ್ಗೆ ದೇವೇಗೌ ಡರವರ ಹೆಸರಿನಲ್ಲಿ ಪೂಜೆ ಸಲ್ಲಿಸಿ ಮೃತ್ಯುಂಜಯ ಹೊ ೕಮವನ್ನು ನಡೆಸಲಾಗು ತ್ತದೆ.

ಈ ಪೂಜಾ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡರು, ಶಾಸಕರು, ಮಾಜಿ ಸಚಿವರು, ಮಾಜಿ ಶಾಸಕರು, ಪದಾಧಿಕಾರಿಗಳು, ವಿಧಾನಸಭಾ ಕ್ಷೇತ್ರ ಅಧ್ಯಕ್ಷರು, ವಿವಿಧ ವಿಭಾಗಗಳ ಅಧ್ಯಕ್ಷರು, ವಾರ್ಡ್ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಭಾಗವಹಿ ಸಲಿದ್ದಾರೆ ಎಂದು ಜೆಡಿಎಸ್ ಪ್ರಕಟಣೆ ತಿಳಿಸಿದೆ.

ಏರ್ ಇಂಡಿಯಾದ ಜನ್ಮ ದಿನಾ ಚರಣೆ :ದೇವೇಗೌಡರ ಜನ್ಮ ದಿನವನ್ನು ಏರ್ ಇಂಡಿಯಾ ವಿಶೇಷವಾಗಿ ಆಚರಿಸುವ ಮೂಲಕ ಗೌರವಸಲ್ಲಿಸಿತು. ದೆಹಲಿಯಿಂದ ಬೆಂಗಳೂರಿಗೆ ಗೌಡರು ವಿಮಾನ ಪ್ರಯಾಣ ಮಾಡುವ ವೇಳೆ 35 ಸಾವಿರ ಅಡಿ ಎತ್ತರದಲ್ಲಿ ಅವರ ಜನ್ಮದಿನವನ್ನು ಆಚರಿಸಿ ಏರ್ಇಂಡಿಯಾ ಪರವಾಗಿ ಸಿಬ್ಬಂದಿಗಳು ದೇವೇಗೌಡರಿಗೆ ಮುಂ ಚಿತವಾಗಿ ಹುಟ್ಟುಹಬ್ಬದ ಶುಭಾಶಯಗಳನ್ನು ನಿನ್ನೆ ಕೋರಿ ದ್ದಾರೆ.

## ನೀರಜ್ ಚೋಪ್ರಾ ಸಾಧನೆ ಕೊಂಡಾಡಿದ ಪ್ರಧಾನಿ



**ನವದೆಹಲಿ,ಮೇ.18-** ಡೈಮಂಡ್ ಲೀಗ್-2025 ನಲ್ಲಿ ನೀರಜ್ ಚೋಪ್ರಾ ಅವರು 90 ಮೀಟರ್ಗಿಂತ ಹೆಚ್ಚು ದೂರ ಜಾವೆಲಿನ್ ಎಸೆದು ಹೊಸ ಸಾಧನೆ ಮಾಡಿದ್ದಾರೆ. ಇದರಿಂದ ಭಾರತಕ್ಕೆ ಸಂತೋಷ ಮತ್ತು ಹೆಮ್ಮೆ ತಂದಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದ್ದಾರೆ.

ನಿರಂತರ ಸಮರ್ಪಣೆ, ಶಿಸ್ತು ಮತ್ತು ಉತ್ಸಾಹ ಯಶಸ್ಸಿಗೆ ಕಾರಣ ಎಂದು ಪ್ರಧಾನಿ ಶ್ಲಾಘಿಸಿದ್ದಾರೆ. ಇದು ಅದ್ಭುತ ಸಾಧನೆ! ದೋಹಾ ಡೈಮಂಡ್ ಲೀಗ್ 2025 ರಲ್ಲಿ 90 ಮೀಟರ್ ಗಡಿ ದಾಟಿ ತಮ್ಮ ವೈಯಕ್ತಿಕ ಅತ್ಯುತ್ತಮ ಎಸೆತವನ್ನು ಸಾಧಿಸಿದ್ದಕ್ಕಾಗಿ ನೀರಜ್ ಚೋಪ್ರಾ ಅವರಿಗೆ ಅಭಿನಂದನೆಗಳು. ಇದು ಅವರ ಪರಿಶ್ರಮ ಫಲಿತಾಂಶವಾಗಿದೆ. ಭಾರತವು ಸಂತೋಷ ಮತ್ತು ಹೆಮ್ಮೆ ಪಡುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.

ಇಲ್ಲಿ ನಡೆದ ಪ್ರತಿಷ್ಠಿತ ಡೈಮಂಡ್ ಲೀಗ್ ಮೀಟಿಂಗ್ ಸರಣಿಯಲ್ಲಿ ಚೋಪ್ರಾ ಅಂತಿಮವಾಗಿ 90.23 ಮೀಟರ್ ಎಸೆತದೊಂದಿಗೆ ಹೊಸ ಸಾಧನೆ ಮಾಡಿದರು ಆದರೆ ಜರ್ಮನಿಯ ಜೂಲಿಯನ್ ವೆಬರ್ 91 ಮೀಟರ್ ಎಸೆದು ದಾಖಲೆ ಬರೆದರು. ಡಬಲ್ ಒಲಿಂಪಿಕ್ ಪದಕ ವಿಜೇತ 27 ವರ್ಷದ ನೀರಜ್ ಜೋಪಾರು ತಮ್ಮ ಮೂರನೇ ಪ್ರಯತ್ನದಲ್ಲಿ 90.23 ಮೀಟರ್ ದೂರ ಜಾವೆಲಿನ್ ಎಸೆದಿದ್ದಾರೆ.

## ಪಾಕಿಸ್ತಾನದಲ್ಲಿ ಧೂಳೆಬ್ಬಿಸಿದ ಭಾರತದ ಬ್ರಹ್ಮೋಸ್ ಕ್ಷಿಪಣಿಗೆ ಭಾರಿ ಡಿಮ್ಯಾಂಡ್..!




**ಬೆಂಗಳೂರು, ಮೇ.18-** ಭಾರತವು ಅಪರೇಷನ್ ಸಿಂಧೂರ್ನಲ್ಲಿ ಪಡೆದ ಯಶಸ್ಸಿಗೆ ಶಬ್ದಾತೀತವೇಗದ ಬ್ರಹ್ಮೋಸ್ ಕ್ಷಿಪಣಿ ಬಳಕೆ ಮಾಡಿದ್ದೇ ಕಾರಣ ಎಂದು ಹೇಳಲಾಗುತ್ತಿದೆ. ಇದು ಈಗ ಜಗತ್ತಿನ ಗಮನ ಸೆಳೆದಿದೆ. ಏಷ್ಯಾ, ಮಧ್ಯಪ್ರಾಚ್ಯ ಮತ್ತು ಲ್ಯಾಟಿನ್ ಅಮೆರಿಕದಾದ್ಯಂತದ ದೇಶಗಳು ಈಗ ಈ ಶಕ್ತಿಶಾಲಿ ಕ್ಷಿಪಣಿ ಖರೀದಿಸಲು ಆಸಕ್ತಿ ತಳೆದಿವೆ.

### ಬ್ರಹ್ಮಸ್ ಕ್ಷಿಪಣಿ ಎಂದರೇನು ?

ಬ್ರಹ್ಮೋಸ್ ಒಂದು ದೀರ್ಘ ವ್ಯಾಪ್ತಿಯ ಶಬ್ದಾತೀತ ವೇಗದ ಸಮರ ಕ್ಷಿಪಣಿಯಾಗಿದ್ದು ಇದನ್ನು ಭಾರತದ ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್ಡಿಓ) ಮತ್ತು ರಷ್ಯಾದ ಎನ್ಪಿಓಎಂ ಜಂಟಿಯಾಗಿ ಅಭಿವೃದ್ಧಿಪಡಿಸಿವೆ. ಇದನ್ನು ನೆಲದಿಂದ, ಗಾಳಿಯಲ್ಲಿ, ಸಮುದ್ರದಿಂದ ಅಥವಾ ಜಲಾಂತರ್ಗಾಮಿಯಿಂದ ಹೇಗೆ ಬೇಕಾದರೂ ಉಡಾವಣೆ ಮಾಡಬಹುದಾಗಿದೆ. ಮಾರ್ಚ್ 3 ರವರೆಗಿನ ವೇಗದಲ್ಲಿ ಇದು ಪಯಣಿಸಬಲ್ಲದು. ಇದು ಫೈರ್ ಅಂಡ್ ಫರ್ಗೆಟ್ ಮಾದರಿಯನ್ನು ಹೈ ಪ್ರಿಸಿಷನ್ನೊಂದಿಗೆ ಅನುಸರಿಸುತ್ತದೆ.

### ಬ್ರಹ್ಮೋಸ್ ಕೆಲಸ ಮಾಡುವ ವಿಧಾನ :

ಈ ಕ್ಷಿಪಣಿ ಎರಡು ಹಂತಗಳಲ್ಲಿ ಚಲಿಸುತ್ತದೆ. ಉಡಾವಣೆಗೆ ಘನ ಬೂಸ್ಟರ್ ಅನ್ನು ಮತ್ತು ಅತಿವೇಗದ ಚಲನೆಗೆ ದ್ರವ ಲ್ಯಾಮ್ಜೆಟ್ ಅನ್ನು ಇದು ಬಳಕೆ ಮಾಡುತ್ತದೆ. 15 ಕಿ.ಮೀ. ಎತ್ತರದಲ್ಲಿ ಹಾರುವ ಇದು ನೆಲದಿಂದ ಕೇವಲ 10 ಮೀಟರ್ ಎತ್ತರದಲ್ಲೂ ಹಾರುವ ಸಾಮರ್ಥ್ಯ ಹೊಂದಿದೆ. ಇದನ್ನು ಪತ್ತೆ ಮಾಡುವುದು ಕಷ್ಟಕರ. ತಡೆಯುವುದು ಇನ್ನೂ ಕಷ್ಟಸಾಧ್ಯ.

**ಫಿಲಿಪ್ಪಿನ್ಸ್:** ಮಾಧ್ಯಮ ವರದಿಗಳ ಪ್ರಕಾರ ಭಾರತವು 2025 ರ ಏಪ್ರಿಲ್ನಲ್ಲಿ ಫಿಲಿಫೀನ್ಸ್ಗೆ 375 ದಶಲಕ್ಷ ಡಾಲರ್ಗಳ ಒಪ್ಪಂದದಡಿ ಬ್ರಹ್ಮಸ್ ಕ್ಷಿಪಣಿಯ ಎರಡನೇ ತಂಡವನ್ನು ಕಳುಹಿಸಿಕೊಟ್ಟಿದೆ. ಇದು ಭಾರತವನ್ನು ಪ್ರಥಮ ಪ್ರಮುಖ ಕ್ಷಿಪಣಿ ರಪ್ತುದಾರ ದೇಶವನ್ನಾಗಿ ಮಾಡಿದೆ ಮತ್ತು ಈ ವಿಶ್ವಾಸಾರ್ಹ ದೀರ್ಘ ಶ್ರೇಣಿಯ ಶಸ್ತ್ರಾಸ್ತ್ರಕ್ಕೆ ಜಾಗತಿಕ ಖರೀದಿದಾರರಿಗೆ ಬಾಗಿಲು ತೆರೆದಿದೆ.

**ವಿಯೆಟ್ನಾಂ:** ತನ್ನ ನೌಕಾಪಡೆ ಬಲವರ್ಧನೆಗಾಗಿ ಬ್ರಹ್ಮಸ್ ಕ್ಷಿಪಣಿಯನ್ನು 700 ದಶಲಕ್ಷ ಡಾಲರ್ ಒಪ್ಪಂದದಡಿ ಖರೀದಿಸಲಿದೆ. ಮಲೇಶಿಯಾ ತನ್ನ ಸು-30 ಜೆಟ್ಗಳು ಮತ್ತು ಕೆಡಾಹ್ ವರ್ಗದ ಸಮರ ನೌಕೆಗಳನ್ನು ಬ್ರಹ್ಮಸ್ನಿಂದ ಬಲಪಡಿಸಲು ಮುಂದಾಗುವ ಸಾಧ್ಯತೆಗಳಿವೆ. ಎರಡೂ ದೇಶಗಳು ದಕ್ಷಿಣ ಚೀನಾ ಸಮುದ್ರದಲ್ಲಿ ವ್ಯಕ್ತವಾಗುವ ಬೆದರಿಕೆಗಳನ್ನು ಎದುರಿಸಲು ಬ್ರಹ್ಮಸ್ನಿಂದ ಸಜ್ಜಾಗುವ ಗುರಿ ಹೊಂದಿವೆ.

### ಮಧ್ಯಪ್ರಾಚ್ಯ ಮತ್ತು ದಕ್ಷಿಣ ಅಮೆರಿಕ ಕ್ಯೂನಲ್ಲಿ

ಈಜಿಪ್ಟ್, ಯುಎಇ, ಸೌದಿ ಅರೇಬಿಯಾ, ಖತಾರ್, ಓಮಾನ್ ಮತ್ತು ಚಿಲಿ, ಬ್ರೆಜಿಲ್, ಅರ್ಜೆಂಟೀನಾ, ವೆನಿಜುವೆಲಾದಂತಹ ದೇಶಗಳು ಬ್ರಹ್ಮಸ್ನ ಕರಾವಳಿ ಮತ್ತು ನೌಕಾ ಆವೃತ್ತಿಗಳನ್ನು ಖರೀದಿಸಲು ಆಸಕ್ತಿ ತೋರಿವೆ. ಈ ನಿಟ್ಟಿನಲ್ಲಿ ಈಗಾಗಲೇ ಮಾತುಕತೆಗಳು ಪ್ರಗತಿಯಲ್ಲಿವೆ. ಭಾರತದ ಬ್ರಹ್ಮಸ್ ಅನ್ನು ಈಗ ಜಾಗತಿಕ ಗೇಮ್ ಚೇಂಜರ್ ಆಗಿ ಭಾವಿಸಲಾಗುತ್ತಿದೆ. ಆಪರೇಷನ್ ಸಿಂಧೂರದಲ್ಲಿ ಇದರ ಬಳಕೆಯಿಂದ ವಿಶ್ವದಾದ್ಯಂತ ಬ್ರಹ್ಮಸ್ ಕ್ಷಿಪಣಿಗೆ ವ್ಯಕ್ತವಾಗಿರುವ ಬೇಡಿಕೆ ಭಾರತದ ರಕ್ಷಣಾ ಉತ್ಪನ್ನಗಳ ರಪ್ತಿನ ಹೆಚ್ಚಳ, ಸ್ವಾವಲಂಬನೆ ಮತ್ತು ಕಾರ್ಯತಂತ್ರಾತ್ಮಕ ಪ್ರಭಾವವನ್ನು ಬಿಂಬಿಸುತ್ತದೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಭಾರತವು ಪಾಕಿಸ್ತಾನದ 3 ಉಗ್ರನೆಲೆಗಳ ಮೇಲೆ ದಾಳಿ ನಡೆಸಿತು. ಕಾರ್ಯಾಚರಣೆ ನಂತರ ಇಡೀ ಜಗತ್ತು ಭಾರತದ ಮಿಲಿಟರಿ ಶಕ್ತಿಯನ್ನು ಕಂಡಿತು. ಆಪರೇಷನ್ ಸಿಂಧೂರ್ನ ಯಶಸ್ಸಿನ ನಂತರ ಭಾರತೀಯ ಮಿಲಿಟರಿ ಶಸ್ತ್ರಾಸ್ತ್ರಗಳು, ಕ್ಷಿಪಣಿಗಳು, ಡ್ರೋನ್ಗಳು ಮತ್ತು ಯುದ್ಧ ವಿಮಾನಗಳು ನಿರಂತರವಾಗಿ ಸುದ್ದಿಯಲ್ಲಿವೆ.

ಈ ಸಂಘರ್ಷದಲ್ಲಿ ಪಾಕಿಸ್ತಾನಕ್ಕೆ ಕಠಿಣ ಸಮಯವನ್ನು ನೀಡಿದ ಭಾರತದ ಸೂಪರ್ಸಾನಿಕ್ ಕ್ಷಿಪಣಿ ಬ್ರಹ್ಮಸ್ ಆಪರೇಷನ್ ಆಪರೇಷನ್ ಸಿಂಧೂರ್ನ ನಂತರ ಅಂತರರಾಷ್ಟ್ರೀಯ ಮಟ್ಟದಲ್ಲಿ ಬ್ರಹ್ಮಸ್ ಕ್ಷಿಪಣಿಗೆ ಬೇಡಿಕೆ ಹಠಾತ್ತನೆ ಹೆಚ್ಚಾಗಿದೆ. ಸಿಂಧೂರ್ನ ಸೂಪರ್ ಹೀರೋ ಆಗಿ ಹೊರಹೊಮ್ಮಿದೆ.

# ಗೌತಮ್ ಬುದ್ಧ ಜಯಂತಿ ಅಂಗವಾಗಿ ಉಚಿತ ನೇತ್ರ ತಪಾಸಣೆ ಶಿಬಿರ

ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ,18–**ಪಟ್ಟಣದ ಜೈ ಭೀಮನಗರದಲ್ಲಿ ಗೌತಮ್ ಬುದ್ಧ ಜಯಂತಿ ಅಂಗವಾಗಿ ನಡೆದ ಉಚಿತ ನೇತ್ರ ತಪಾಸಣೆ ಶಿಬಿರಕ್ಕೆ ತಾ.ಕಾಂಗ್ರೇಸ್ ಕಾರ್ಮಿಕ ಘಟಕದ ಅಧ್ಯಕ್ಷರಾದ ಕಾಮೇಶ್ ಮಂದಕಲ್ ಚಾಲನೆ ನೀಡಿ ಮಾತನಾಡಿ ಗೌತಮ್ ಬುದ್ಧ ಜಯಂತಿಯನ್ನು ಅರ್ಥ ಪೂರ್ಣವಾಗಿ ಆಚರಿಸುವ ಆಂಗವಾಗಿ ವಾರ್ಡಿನಲ್ಲಿರುವ ವೃದ್ದರ ಕಣ್ಣು ಪರೀಕ್ಷೆ ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.



ನೇತ್ರ ತಜ್ಞರಾದ ಡಾ.ವೀರೇಶ ರವರು ನೂರಾಕ್ಕು ಹೆಚ್ಚು ವೃದ್ದರ ನೇತ್ರ ತಪಾಸಣೆ ನಡೆಸಿದರು.

ಕಾರ್ಯಕ್ರಮದಲ್ಲಿ ಪುರಸಭೆ ಸದಸ್ಯರಾದ ಸಾಬೀರ್‌ಪಾಷಾ, ಮುಖಂಡರಾದ ವೀರೇಶ, ಖಾಸಿಂಸಾಬ್ ,ಲಿಂಗರಾಜ, ಆಂಜನೇಯ್ಯ ಸೇರಿದಂತೆ ಇನ್ನಿತರರು ಇದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9972778310

# ರಾಷ್ಟ್ರೀಯ ಡೆಂಗ್ಯೂ ವಿರೋಧಿ ದಿನಚಾರಣೆ ಆಂಗವಾಗಿ ಜಾಗೃತಿ ಕಾರ್ಯಕ್ರಮ



ಯುವ ಮಾರ್ಗ ಸುದ್ದಿ

**ಮಾನ್ವಿ,ಮೇ.18–** ತಾಲೂಕಿನ ಅಮರೇಶ್ವರ ಕ್ಯಾಂಪಿನ ಅಂಗನವಾಡಿ ಕೇಂದ್ರದಲ್ಲಿ ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ, ಪ್ರಾಥಮಿಕ ಆರೋಗ್ಯ ಕೇಂದ್ರ ಪೋತ್ನಾಳ್ ಹಾಗೂ ಅಯುಷ್ಮನ್ ಆರೋಗ್ಯ ಮಂದಿರ ಜಿನೂರ್ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರೀಯ ಡೆಂಗ್ಯೂ ವಿರೋಧಿ ದಿನಚಾರಣೆ ಆಂಗವಾಗಿ ಜಾಗೃತಿ ಕಾರ್ಯಕ್ರಮದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪನಾಯಕ ಮಾತನಾಡಿ ಮಳೆಗಾಲ ಪ್ರಾರಂಭವಾಗಲಿದ್ದು ತಮ್ಮ ಮನೆಯ ಸುತ್ತ ಮುತ್ತ ಪ್ರದೇಶದಲ್ಲಿ ನೀರು ಸಂಗ್ರಹಣೆಯಾಗುವುದಕ್ಕೆ ಅವಕಾಶ ನೀಡಿದಲ್ಲಿ ನಿಂತ ನೀರಿನಲ್ಲಿ ಸೊಳ್ಳೆಗಳು ತಮ್ಮ ಮೊಟ್ಟೆಗಳನ್ನು ಇಟ್ಟು ಸಂತಾನವನ್ನು ಹೆಚ್ಚಿಸಿ ಕೊಳ್ಳುತ್ತವೆ. ಈಡೀಸ್ ಈಜಿಪ್ಟ್ ಎನ್ನುವ ಹೆಣ್ಣು ಸೊಳ್ಳೆ ಕಚ್ಚುವುದರಿಂದ ಮನವರಲ್ಲಿ ಡೆಂಗ್ಯೂ ಕಾಯಿಲೆ ಕಾಣಿಸಿಕೊಳ್ಳುತ್ತದೆ ಸರಿಯಾದ ಚಿಕಿತ್ಸೆ ನೀಡದೆ ಇದ್ದಲ್ಲಿ ಸಾವು ಕೂಡ ಸಂಭವಿಸುತ್ತದೆ ಅದ್ದರಿಂದ ಪ್ರತಿಯೊಬ್ಬರು ಸೊಳ್ಳೆ ಕಚ್ಚದಂತೆ ಅಗತ್ಯವಾದ ಮುನ್ನೆಚ್ಚರಿಕೆಯನ್ನು ವಹಿಸಬೇಕು ಹಾಗೂ ಸೊಳ್ಳೆ ನಿರೋಧಕಗಳನ್ನು ಬಳಸಬೇಕು ಡೆಂಗ್ಯೂ ಕಾಯಿಲೆಯ ಲಕ್ಷಣಗಳಾದ ತೀವ್ರ ತಲೆ ನೋವು, ವಾಂತಿ, ವಾಕರಿ ಕೆ,ಕೀಲು,ಮಾಂಸ ಖಂಡಗಳಲ್ಲಿ ನೋವು,ಜ್ವರ ಕಂಡು ಬಂದಲ್ಲಿ ಕೂಡಲೇ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುವಂತೆ ತಿಳಿಸಿದರು.ಕಾರ್ಯಕ್ರಮದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ದೇವೇಂದ್ರಪ್ಪ, ಆಶಾಕಾರ್ಯಕರ್ತರಾದ ನಾಗಮ್ಮ ಸೇರಿದಂತೆ ಇತರರು ಇದ್ದರು.

# ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಮೇ.18–**ಇಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಇಲಾಖೆಯ ವೆಬ್‌ಸೈಟ್ ವಿಳಾಸ: https://shp.karnataka.gov.in/bcwd ಮತ್ತು ವಿವರ, ಅರ್ಹತೆ ಸಲ್ಲಿಸಬೇಕಾದ ದಾಖಲೆಗಳು ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ ಭೇಟಿ ನೀಡಬೇಕಾದ ವೆಬ್‌ಸೈಟ್ ವಿಳಾಸ: https://bcwd.karnataka.gov.in ನ್ನು ನೋಡಬಹುದು. ಅಲ್ಲದೆ ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ www.bcwdhelpline@gmail.com ಇ-ಮೇಲ್ ಮುಖಾಂತರ ಅಥವಾ ಜಿಲ್ಲಾ ಅಥವಾ ತಾಲ್ಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನು ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 08532-295996, 8050770004, 805770005ಗೆ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಒಳಮೀಸಲಾತಿ ಸಮೀಕ್ಷೆ: ಗಣತಿದಾರರಿಗೆ ಸನ್ಮಾನ



ಯುವ ಮಾರ್ಗ ಸುದ್ದಿ

**ಲಿಂಗಸುಗೂರು.ಮೇ,18–** ಮುದಗಲ್ ಸಮೀಪ ತೆರಿಭಾವಿ ಗ್ರಾಮದಲ್ಲಿ ಒಳಮೀಸಲಾತಿ ಸಮೀಕ್ಷೆಗೆ ಆಗಮಿಸಿದ ಬುದ್ದಿನ್ನಿ(ಟಿ) ಶಾಲೆಯ ಶಿಕ್ಷಕರು ಪ್ರತಿಯೊಂದು ಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿದ್ದರಿಂದ ಅವರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಶಿವಶರಣಪ್ಪ ಕನ್ನಾಳ, ಮಾನಪ್ಪ ದೇವರಮನಿ, ಭೀಮಪ್ಪ ದೇವರಮನಿ, ಅಮರೇಶ ಕನ್ನಾಳ, ಹನುಮಪ್ಪ ದೊಡ್ಡಮನಿ, ಶರಣಪ್ಪ ನೀರಾವರಿ, ಬಸಪ್ಪ, ಅಮರೇಶ, ಯಮನಪ್ಪ, ನಾಗರಾಜ, ಕರಿಯಪ್ಪ, ಶರಣಪ್ಪ ಬಳ್ಳಾರಿ ಸೇರಿದಂತೆ ಗ್ರಾಮಸ್ಥರು ಇದ್ದರು.

# ಬುದ್ಧ ಬಸವ ಅಂಬೇಡ್ಕರ್ ರವರುಗಳ ವಿಚಾರಗಳನ್ನು ಅಳವಡಿಸಿಕೊಳ್ಳಬೇಕು : ರವಿ ಪಾಟೀಲ್

ಯುವ ಮಾರ್ಗ ಸುದ್ದಿ

**ದೇವದುರ್ಗ,ಮೇ.18–** ಮಲದಕಲ್ ಗೆಳೆಯರ ಬಳಗ ಮತ್ತು ವಿವಿಧ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ ಭಾರತದ ಸಮಾನತೆಯ ಹರಿಕಾರರಾದ ಭಗವಾನ್ ಬುದ್ಧ, ಕಲ್ಯಾಣ ಕ್ರಾಂತಿಯ ಹರಿಕಾರರಾದ ಬಸವೇಶ್ವರರು ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಜಯಂತೋತ್ಸವ, ಅಭಿನಂದನಾ ಸಮಾರಂಭ ಹಾಗೂ ಮಲದಕಲ್ ಗೆಳೆಯ ಬಳಗದಿಂದ ನವೀಕರಣವಾದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಉದ್ಘಾಟನೆಯನ್ನು ಮಾಡಲಾಯಿತು.



ಕಾರ್ಯಕ್ರಮದ ಉಪಸ್ಥಿತಿಯನ್ನು ವಹಿಸಿದ್ದ ರವಿ ಪಾಟೀಲ್ ಫೌಂಡೇಶನ್ ಅಧ್ಯಕ್ಷರು ಹಾಗೂ ಯುವ ಮುಖಂಡರಾದ ರವಿಪಾಟೀಲ್ ಮಾತನಾಡುತ್ತಾ ಬುದ್ಧ ಬಸವ ಅಂಬೇಡ್ಕರ್ ರವರುಗಳ ವಿಚಾರಗಳನ್ನು ಪ್ರತಿಯೊಬ್ಬ ರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಈ ಕಾರ್ಯಕ್ರಮುವನ್ನು ಡಯಟ್ ರಾಯಚೂರಿನ ಹಿರಿಯ ಉಪನ್ಯಾಸಕರಾದ ಮಲ್ಲಿಕಾರ್ಜುನರವರು ಉದ್ಘಾಟಿಸಿದರು, ಸಮಾರಂಭದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಉಪನ್ಯಾಸಕರಾದ ವಿನೋದ್ ಕುಮಾರ್ ಹಿರೇಬೂದೂರು ರವರು ಮಲದಕಲ್ ಗೆಳೆಯರ ಬಳಗ ಮತ್ತು ಜ್ಞಾನವೃಕ್ಷ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ಸಾಮಾಜಿಕ ಚಟುವಟಿಕೆಗಳನ್ನು ವಿವರಿಸಿದರು.

ಉಪನ್ಯಾಸಕರಾದ ನರಸಪ್ಪ ಜಿ. ರವರು ಕಾರ್ಯಕ್ರಮವನ್ನು ನಿರೂಪಿಸಿದರೇ ಬಾಳಪ್ಪ ತಳವಾರ ಸ್ವಾಗತಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶಿವರಾಜ್ ಅಬಕಾರಿ ರಾಮದುರ್ಗ ವಹಿಸಿದ್ದರು.

ಸಮಾರಂಭದ ವೇದಿಕೆಯಲ್ಲಿ ಬಸವರಾಜ ಬಿರಾದಾರ, ಡಾ. ತಿಪ್ಪಣ್ಣ ಶಾವಂತಗೇರಾ ,ಪ್ರಭು ನಾಯಕ ಕೊತ್ತದೊಡ್ಡಿ, ಸಂಗಣ್ಣ ಪಟ್ಟಣಶೆಟ್ಟಿ, ಡಾ. ಮಾರುತಿ ಕುಮಾರ ಮಲದಕಲ್, ಶರಣು ಪಾಟೀಲ್ ಹೆರೂರು, ಯಲ್ಲಪ್ಪ ಮರಾಟ, ಶಿವಾನಂದ ಮಸೀದಾಪುರ, ಸೇರಿದಂತೆ ಗ್ರಾಮದ ವಿವಿಧ ಸಮಾಜದ ಮುಖಂಡರುಗಳು, ಸುತ್ತ ಮುತ್ತಲಿನ ಊರಿನ ಜನ ಸೇರಿದಂತೆ ಮಲದಕಲ್ ಗೆಳೆಯರ ಬಳಗ ಮತ್ತು ಜ್ಞಾನವೃಕ್ಷ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ದೇವದುರ್ಗ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಲದ 'ಕಲ್ ಗೆಳೆಯರ ಬಳಗದ ವತಿಯಿಂದ ನವೀಕರಣಗೊಂಡ ಅಂಬೇಡ್ಕರ್ ಭವನವನ್ನು ಲೋಕಾರ್ಪಣೆ ಮಾಡಲಾಯಿತು ಮತ್ತು ಸರ್ಕಾರಿ ಪ್ರೌಢಶಾಲೆ ಎನ್. ಗಣೇಕಲ್ ನಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ರವಿ ಪಾಟೀಲ್ ಫೌಂಡೇಶನ್ ವತಿಯಿಂದ ನಗದು ಬಹುಮಾನ ನೀಡಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಲಾಯಿತು.

# ಪ್ರಥಮ ದರ್ಜೆ ಕಾಲೇಜಿನಲ್ಲಿ ವಿವಿಧ ವಿಭಾಗಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ರಾಯಚೂರು,ಮೇ.18–** ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿಗಾಗಿ ವಿವಿಧ ವಿಭಾಗಗಳಿಗೆ ಪ್ರವೇಶಾತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಕಾಲೇಜಿನಲ್ಲಿ ಬಿಎ, ಬಿಕಾಂ, ಬಿಎಸ್ಸಿ ಹಾಗೂ ಬಿಸಿಎ ಪದವಿ ಕೋರ್ಸುಗಳಿಗೆ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ಎಲ್ಲಾ ವಿಭಾಗದಲ್ಲಿ ಪರಿಣಿತ ಖಾಯಂ ಪ್ರಾಧ್ಯಾಪಕರು ಹಾಗೂ ಸಹ ಪ್ರಾಧ್ಯಾಯಾಪಕರುಗಳು ಹಾಗೂ ಅತಿಥಿ ಉಪನ್ಯಾಸಕರುವಿದ್ದು, ಬಿಎಸ್ಸಿ, ಬಿಸಿಎ ವಿಭಾಗದಲ್ಲಿ ವಿಷಯವಾರು ಪ್ರಯೋಗಾಲಯಗಳು ಇದ್ದು, ಗುಣಮಟ್ಟದ ಉನ್ನತ ವ್ಯಾಸಾಂಗದ ಆಸಕ್ತಿ ಇರುವವರು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೇ.21ರಂದು ಸಾರ್ವಜನಿಕರ ಕುಂದುಕೊರತೆ ಸಭೆ

**ರಾಯಚೂರು,ಮೇ.18–** ಜಿಲ್ಲಾ ಲೋಕಾಯುಕ್ತ ಪೊಲೀಸರ ವತಿಯಿಂದ ಮೇ.21 ಬುಧವಾರ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಜಿಲ್ಲೆಯ ಸಿಂಧನೂರು ತಹಶೀಲ್ದಾರ್ ಕಚೇರಿಯಲ್ಲಿ ಸಭಾಂಗಣದಲ್ಲಿ ಸಾರ್ವಜನಿಕರ ಕುಂದುಕೊರತೆ ಹಾಗೂ ಅಹವಾಲುಗಳ ಸಭೆಯಲ್ಲಿ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕರ್ನಾಟಕ ಲೋಕಾಯುಕ್ತ ಪೋಲೀಸ್ ಅಧೀಕ್ಷಕರಾದ ಎಂ.ಎನ್.ಶಶಿಧರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಶಾ ಕಾರ್ಯಕರ್ತೆಯರ ಗೌರವಧನ 1000 ರೂ. ಹೆಚ್ಚಳ




**ಬೆಂಗಳೂರು.ಮೇ,18–** ಆಶಾ ಕಾರ್ಯಕರ್ತೆಯರ ಮಾಸಿಕ ಗೌರವಧನವನ್ನು 1,000 ರೂಪಾಯಿಗಳಷ್ಟು ಹೆಚ್ಚಿಸಿ ಸರ್ಕಾರ ಅಧಿಕೃತ ಆದೇಶವನ್ನು ಹೊರಡಿಸಿದೆ. ಇದು 2025-26ರ ಆಯವ್ಯಯ ಭಾಷಣದ ಭಾಗವಾಗಿ ಘೋಷಿಸಲಾದ ಪ್ರಮು? ನಿರ್ಣಯವಾಗಿದೆ.

ಈ ಬಗ್ಗೆ 2025-26ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಘೋಷಿಸಿತ್ತು. ಈ ಘೋಷಣೆ ಅನ್ವಯ ಆಯುಷ್ಮಾನ್ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರದ ಆರೋಗ್ಯ ಉಪಕೇಂದ್ರಗಳು ಮತ್ತು ನಗರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ತಂಡ ಆಧಾರಿತ ಪ್ರೋತ್ಸಾಹಧನ ನೀಡಲಾಗುತ್ತದೆ.ಇದರಿಂದಾಗಿ ಗೌರವಧನ ರೂ1 ಸಾವಿರ ಹೆಚ್ಚಳವಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧೀನ ಕಾರ್ಯದರ್ಶಿಯು ಹೊರಡಿಸಿದ ನಡವಳಿಯ ಪ್ರಕಾರ, "ಆಶಾ ಕಾರ್ಯಕರ್ತೆಯರಿಗೆ ತಂಡ ಆಧಾರಿತ ಪ್ರೋತ್ಸಾಹಧನ ನೀಡುವ ಮೂಲಕ ಗೌರವಧನವನ್ನು 1,000 ರೂಪಾಯಿಗಳಷ್ಟು ಹೆಚ್ಚಿಸಲಾಗುವುದು" ಎಂದು 2025-26ರ ಬಜೆಟ್ನ ಖಂಡಿಕೆ 148ರಲ್ಲಿ ಘೋಷಿಸಲಾಗಿದೆ.

ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಹಾಗೂ ನಗರ ಪ್ರದೇಶದಲ್ಲಿ ಎರಡೂವರೆ ಸಾವಿರ ಜನಸಂಖ್ಯೆಗೆ ಒಬ್ಬರಂತೆ ಆಶಾ ಕಾರ್ಯಕರ್ತೆಯರನ್ನು ನೇಮಕ ಮಾಡಲಾಗುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ 42,524 ಹುದ್ದೆಗಳು ಮಂಜೂರಾಗಿದ್ದು, ರಾಜ್ಯದಲ್ಲಿ ಸದ್ಯ 41 ಸಾವಿರ ಆಶಾ ಕಾರ್ಯಕರ್ತೆಯರು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಆದೇಶ ಹೇಳಿದೆ.

# ಬಂಧಿಗಳ ಮಕ್ಕಳಿಗೆ ಉಚಿತ ವಸತಿಯೊಂದಿಗೆ ಶಿಕ್ಷಣ: ಜಾಗೃತಿ ಕಾರ್ಯಕ್ರಮ

**ಕಲಬುರಗಿ,ಮೇ.18–**ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ ಸೋಕೇರ್ ಇಂಡ್ ಸಂಸ್ಥೆ ವತಿಯಿಂದ ಬಂಧಿಗಳ ಮಕ್ಕಳಿಗೆ ಉಚಿತವಾಗಿ ವಸತಿಯೊಂದಿಗೆ ಶಿಕ್ಷಣವನ್ನು ಸುಮಾರು 15 ವರ್ಷದಿಂದ ನಿರಂತರವಾಗಿ ಬಂಧಿಗಳ ಮಕ್ಕಳಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ. 2025-26ನೇ ಸಾಲಿನಲ್ಲಿ ಮಕ್ಕಳನ್ನು ದಾಖಲಿಸುವಂತೆ ಜಾಗೃತಿ ಮತ್ತು ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಕಾರ್ಯಕ್ರಮಕ್ಕೆ ಸೋಕೇರ್ ಇಂಡ್ ಸಂಸ್ಥೆ ಕಲಬುರಗಿಯ ಅಧ್ಯಕ್ಷರಾದ ಪ್ರಕಾಶ ಕುಲಕರ್ಣಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತ, ನಮ್ಮ ಸಂಸ್ಥೆಯು ಶೃಂಗೇರಿ ಶಾರಾದಾಂಬೆ ಪೀಠದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತ ಬಂಧಿಗಳ ಮಕ್ಕಳಿಗೆ ಉಚಿತ ಹಾಗೂ ವಸತಿಯೊಂದಿಗೆ 1ನೇ ತರಗತಿಯಿಂದ 10ನೇ ತರಗತಿವರೆಗೆ ದಾಖಲಿಸಿಕೊಂಡು ಶಿಕ್ಷಣವನ್ನು ನೀಡಲಾಗುತ್ತಿದೆ. ತಾವುಗಳು ತಮ್ಮ ಮಕ್ಕಳನ್ನು ಈ ಸಂಸ್ಥೆಯ ಅಡಿಯಲ್ಲಿ ದಾಖಲಿಸಿ ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿಯನ್ನು ಹಾಕಬೇಕಾಗಿ ಹೇಳಿದರು.




ಸಂಸ್ಥೆಯ ಸದಸ್ಯ ಗುರುರಾಜ ಕುಲಕರ್ಣಿಯವರು ಮಾತನಾಡುತ್ತ, ನಮ್ಮ ಜೀವನಕ್ಕೆ ಶಿಕ್ಷಣ ಬಹಳ ಮುಖ್ಯ. ಅದರಲ್ಲಿ ವಿಶೇಷವಾಗಿ ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಕಲಿಸಿ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ಅವಶ್ಯಕವಾಗಿದೆ. ಹಾಗಾಗಿ ತಾವುಗಳು ಈ ಸಂಸ್ಥೆಯ ಅಡಿಯಲ್ಲಿ ಮಕ್ಕಳನ್ನು ಸೇರಿಸಿ ಮುಂದಿನ ಜೀವನಕ್ಕೆ ಅಡಿಪಾಯ ಹೇಳಿದರು.

ಈ ಸಂಸ್ಥೆಯ ಮುಖ್ಯಸ್ಥರಾದ ಡಾ.ಅನಿತಾ ಆರ್.ರವರು ಮಾತನಾಡುತ್ತ, ಶಿಕ್ಷಣ ಇಲ್ಲದೇ ನಾವು ನಮ್ಮ ಯಶಸ್ಸನ್ನು ಸಾಧಿಸಲು ಸಾಧ್ಯವಿಲ್ಲ. ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಶಿಕ್ಷಣವೆಂದರೆ ಮನಸ್ಸು ದೇಹ, ಬುದ್ದಿಗಳೊಂದಿಗೆ ಒಳ್ಳೆಯ ಸಂಸ್ಕಾರವಾಗಿದೆ. ವ್ಯಕ್ತಿಯ ಸಂಪೂರ್ಣ ಬೆಳವಣಿಗೆಗೆ ಶಿಕ್ಷಣದ ಅವಶ್ಯಕತೆ ಇದೆ. ಮಗುವಿನ ಶಾರೀರಿಕ ಮಾನಸಿಕ ಹಾಗೂ ಅಧ್ಯಾತ್ಮಿಕ ಶಕ್ತಿಗಳ ಪೂರ್ಣ ವಿಕಾಸವನ್ನು ಉಂಟು ಮಾಡುವುದೇ ಶಿಕ್ಷಣ ಶಿಕ್ಷಣ ವ್ಯಕ್ತಿಯಲ್ಲಿ ಪರಿವರ್ತನೆಯನ್ನು ಉಂಟು ಮಾಡುತ್ತದೆ. ಅದಕ್ಕೆ ತಾವುಗಳು ತಮ್ಮ ಮಕ್ಕಳನ್ನು ಈ ಸಂಸ್ಥೆಯ ಅಡಿಯಲ್ಲಿ ಉತ್ತಮ ಸೌಲಭ್ಯಗಳೊಂದಿಗೆ ಶಿಕ್ಷಣ ನೀಡಲಾಗುತ್ತಿದೆ. ಇದರ ಲಭಾವನ್ನು ತಾವು ಪಡೆದುಕೊಳ್ಳಲು ತಿಳಿಸಿದೆ. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹಾಯ ಅಧೀಕ್ಷಕ ಚನ್ನಪ್ಪ, ಜೈಲಗಳಾದ ಸುನಂದ ವಿ., ಸಾಗರ ಪಾಟೀಲ್, ಶ್ರೀಮಂತಗೌಡ ಪಾಟೀಲ್ ಮತ್ತು ಜೈಲರ ಶಾಮ ಬಿದ್ರಿ ಉಪಸ್ಥಿತರಿದ್ದರು. ಸಂಸ್ಥೆಯ ಶಿಕ್ಷಕ ನಾಗರಾಜ ಮುಲಗೆ ಕಾರ್ಯಕ್ರಮ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಅಧಿಕಾರಿ/ ಸಿಬ್ಬಂದಿಗಳು ಭಾಗವಹಿಸಿದ್ದರು.

# ಜೆಸ್ಕಾಂನಿಂದ ಮೇ.19 ರಂದು ಗ್ರಾಹಕರ ಸಭೆ

**ರಾಯಚೂರು,ಮೇ.18–** ಇಲ್ಲಿನ ಜೆಸ್ಕಾಂ ಇಲಾಖೆಯಿಂದ ಜಿಲ್ಲೆಯ ಜೆಸ್ಕಾಂ ಉಪ-ವಿಭಾಗ-2ರ ಕಚೇರಿಯಲ್ಲಿ ಗ್ರಾಹಕರ ಸಂವಾದ ಸಭೆಯನ್ನು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಮೇ 19 ರಂದು ಬೆಳಗ್ಗೆ 11 ರಿಂದ 1ರವರೆಗೆ ಏರ್ಪಡಿಸಲಾಗಿದೆ. ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಜರಾಗಿ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ-ವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಚಟ್ಟರಕಿಗೆ ಸಾಧಕ ಪ್ರಶಸ್ತಿ

**ವಿಜಯಪುರ, ಮೇ. 18–** ಸಮಾಜ ಸೇವೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿಜಯಪುರದ ಲಾಲಸಾಬ ಚಟ್ಟರಕಿ ಅವರು ಸಾಧಕ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಇಂಡಿಯನ್ ಮ್ಯೂಸಿಕಲ್ ಫೆಸ್ಟಿವಲ್ ಅಂಗವಾಗಿ ಬೆಂಗಳೂರಿನ ಯಶವಂತಪುರದ ಲಲಿತಕಲಾ ಅಡೋಟೋರಿಯಂನಲ್ಲಿ ಸ್ವರ ಸಂಗಮ ಕಲಾ ವೃಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಸಮಾರಂಭದಲ್ಲಿ ಚಟ್ಟರಕಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಸಮಾಜ ಸೇವೆಯಲ್ಲಿ ಗಣನೀಯ ಸಾಧನೆ ಮಾಡಿದ್ದನ್ನು ಪರಿಗಣಿಸಿ ಚಟ್ಟರಕಿ ಅವರಿಗೆ ಸಾಧಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

Owned, Printed and published by **ANILKUMAR H** from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at **MAA FRIENDS PRINTING PRESS,** Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: **ANILKUMAR H**